ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

ಸಂಪುಟ : 7 । ಸಂಚಿಕೆ : 8 । ಆಗಸ್ಟ್-2025 । ಪುಟಗಳು : 20 । ಬೆಲೆ : 25/-




ನಾಡಿನ ಸಮಸ್ತ ಸಹಕಾರಿಗಳಿಗೆ

ನೇ ಸ್ವಾತಂತ್ರ್ಯ ದಿನಾಚರಣೆ ಹಾಗೂ ಗೌರಿ -ಗಣೇಶ ಹಬ್ಬದ

ಶುಭಾಶಯಗಳು

ಧ್ಯೇಯ: ಸ್ವಾತಂತ್ರ್ಯವನ್ನು ಗೌರವಿಸುವುದು,
ಭವಿಷ್ಯವನ್ನು ಪ್ರೇರೇಪಿಸುವುದು


ಅಧ್ಯಕ್ಷರು


ಉಪಾಧ್ಯಕ್ಷರು



ಹಾಗೂ ಆಡಳಿತ ಮಂಡಳಿ ಸದಸ್ಯರು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ, ಬೆಂಗಳೂರು.



## ರಾಷ್ಟ್ರೀಯ ಸಹಕಾರ ನೀತಿ-2025
## ಕೇಂದ್ರ ಸಚಿವ ಅಮಿತ್ ಷಾ ಅವರಿಂದ ಅನಾವರಣ
## 2034ರ ವೇಳೆಗೆ 50 ಕೋಟಿ ಸದಸ್ಯತ್ವ, ಜಿಡಿಪಿ 3 ಪಟ್ಟು ಹೆಚ್ಚಳಕ್ಕೆ ಗುರಿ



## ಸಹಕಾರ ಸಚಿವರು ಹಾಗೂ ಕಾನೂನು ಸಚಿವರಿಂದ ರಾಜ್ಯಪಾಲರ ಸೌಹಾರ್ದ ಭೇಟಿ

## ಸಹಕಾರ ಸಚಿವ ಕೆ.ಎನ್. ರಾಜಣ್ಣ ಹಾಗೂ ಕಾನೂನು ಸಚಿವ ಹೆಚ್.ಕೆ. ಪಾಟೀಲ್ ರವರಿಂದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರೊಂದಿಗೆ ಸೌಹಾರ್ದ ಭೇಟಿ



**ಬೆಂಗಳೂರು:** ಸಹಕಾರ ಸಚಿವ ಕೆ.ಎನ್. ರಾಜಣ್ಣ ರವರು ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಹೆಚ್.ಕೆ. ಪಾಟೀಲ್ ರವರು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಕಳೆದವಾರ ಸೌಹಾರ್ದಯುತ ಭೇಟಿ ಮಾಡಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಸೇರಿದಂತೆ ಪ್ರಮುಖ ವಿಷಯಗಳ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಸಹಕಾರ ಇಲಾಖೆಯ ಕಾರ್ಯದರ್ಶಿ ಸಂಜಯ ಬಿ. ಶೆಟ್ಟೆಣ್ಣವರ ಮತ್ತು ಸಹಕಾರ ಸಂಘಗಳ ನಿಬಂಧಕರಾದ ಟಿ.ಎಚ್.ಎಂ. ಕುಮಾರ್ ಅವರುಗಳು ಉಪಸ್ಥಿತರಿದ್ದರು.

## ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರ ಅಧ್ಯಕ್ಷತೆಯಲ್ಲಿ ಸಹಕಾರ ಸಂಘಗಳ ಕಾಯ್ದೆ ತಿದ್ದುಪಡಿ ಕುರಿತು ಸಭೆ




**ಬೆಂಗಳೂರು:** ಸಹಕಾರ ಸಂಘಗಳ ನಿಬಂಧಕರ ಕಚೇರಿಯಲ್ಲಿ ಜುಲೈ 10 ರಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರ ಅಧ್ಯಕ್ಷತೆಯಲ್ಲಿ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮಗಳು 1960ರ ತಿದ್ದುಪಡಿ ವಿಧೇಯಕ ಮತ್ತು ಸೌಹಾರ್ದ ಸಹಕಾರ ಸಂಘಗಳ ಕಾಯ್ದೆ 1995ಕ್ಕೆ ಸಂಬಂಧಿಸಿದಂತೆ ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಪ್ರಮುಖ ವಿಚಾರಗಳ ಬಗ್ಗೆ ಚರ್ಚಿಸಿದರು.

ಈ ಸಭೆಯಲ್ಲಿ ಸಹಕಾರ ಸಂಘಗಳ ನಿಬಂಧಕರಾದ ಟಿ.ಎಚ್.ಎಂ. ಕುಮಾರ್, ಸಹಕಾರ ಸಚಿವರ ವಿಶೇಷ ಕರ್ತವ್ಯ ಅಧಿಕಾರಿ ರಮಣರೆಡ್ಡಿ, ಇಲಾಖೆಯ ಕಾನೂನು ಸಲಹೆಗಾರರಾದ ಕಿರಣ್ ಕುಮಾರ್, ಅಪರ ನಿಬಂಧಕರುಗಳಾದ ಹೆಚ್. ಬಾಲಶೇಖರ್, ಎ.ಸಿ. ದಿವಾಕರ್, ಜಿ.ಎಂ. ರವೀಂದ್ರ, ಲಕ್ಷ್ಮೀಪತಯ್ಯ, ಜಂಟಿ ನಿಬಂಧಕರುಗಳಾದ ಸುರೇಶ್‌ಗೌಡ, ಪಿ. ಮಹೇಶ್, ಯಶಸ್ವಿನಿ, ಎಂ. ವೆಂಕಟೇಶ್, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಸ್. ನವೀನ್ ಮತ್ತಿತರರು ಉಪಸ್ಥಿತರಿದ್ದರು.

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

## ಆಡಳಿತ ಮಂಡಳಿ



ಶಿದ್ದನಗೌಡ ಸಂಣರಾಮನಗೌಡ ಪಾಟೀಲ
ಸಹಕಾರಿ ಪಿತಾಮಹ



ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು



ಎಸ್. ಚಂದ್ರಶೇಖರ್
ಅಧ್ಯಕ್ಷರು



ಧರೇಪ್ಪ ಎಂ. ಆಲಗೂರ
ಉಪಾಧ್ಯಕ್ಷರು



ಸಿ.ಎಂ. ಮಾರೇಗೌಡ
ನಿರ್ದೇಶಕರು



ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು



ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು



ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು



ಎಂ.ಜೆ. ನರೇಂದ್ರಕುಮಾರ
ನಿರ್ದೇಶಕರು



ಕೆ. ಕೃಷ್ಣಮೂರ್ತಿ
ನಿರ್ದೇಶಕರು



ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು



ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು



ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು



ಉಮೇಶ ಶಿ. ಬಾಳಿ
ನಿರ್ದೇಶಕರು



ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು



ಡಾ. ನಾಗೇಂದ್ರ ಡಿ.ಎಲ್.
ನಿರ್ದೇಶಕರು



ವೈ. ಶ್ರೀನಿವಾಸಗೌಡ
ನಿರ್ದೇಶಕರು



ಜಗದೀಶ ಕಂದಿಕರೆ
ನಿರ್ದೇಶಕರು



ರಾಜೇಶ್ ಟಿ.
ನಿರ್ದೇಶಕರು



ಶಿವಕುಮಾರ ಬಸವರಾಜು ಬಾದವಾಡಗಿ
ನಿರ್ದೇಶಕರು



ಶಿವಾನಂದ ಬಸಪ್ಪ ನ್ಯಾಮಗೌಡ
ನಿರ್ದೇಶಕರು



ಹೆಚ್. ಅಶೋಕ್
ನಿರ್ದೇಶಕರು



ಚಂದ್ರಶೇಖರ್ ಕೋಲ್ಹಾರು
ನಿರ್ದೇಶಕರು



ಪ್ರಜ್ವಲ್ ಕೆ.ಎನ್.
ಮುಖ್ಯಕಾರ್ಯನಿರ್ವಹಣಾಧಿಕಾರಿ

**SAHAKARA VARTHA PATHRIKE KANNADA MONTHLY**
RNI-Reg No.KARKAN/2018/75796
Post Reg No.KA-BGW/1816/2025-27
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 31st of Previous Month
License to post without prepayment
PMG BG/WPP-405/2025-27




ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ
ಬೆಂಗಳೂರು ನಂ. 126 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಜೆಬಿ ಕಾವಲ್,
ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096

**Printed at : Biligiri Printers**
**Chamrajpet, Bengaluru - 18**

## ಸಂಪಾದಕೀಯ



ಎಸ್. ಚಂದ್ರಶೇಖರ್
ಅಧ್ಯಕ್ಷರು

ಸ್ವಾತಂತ್ರ ಹೋರಾಟಗಾರ ರೈತ ಮುಖಂಡ ತ್ರಿಭುವನದಾಸ್ ಕಿಶಿ ಬಾಯ್ ಪಟೇಲ್ ಅವರ ನಾಯಕತ್ವ ದೇಶದ ಸಹಕಾರಿ ಹೈನೋದ್ಯಮ ಬೃಹದಾಕಾರವಾಗಿ ಬೆಳೆಯಲು ಕಾರಣಕರ್ತರಾದವರು. ಈ ಹಿನ್ನೆಲೆಯಲ್ಲಿ ತ್ರಿಭುವನದಾಸ್ ಪಟೇಲ್ ಅವರ ಹೆಸರನ್ನು ವಿಶ್ವವಿದ್ಯಾಲಯಕ್ಕೆ ನಾಮಕರಣ ಮಾಡಿರುವುದು ಬದ್ಧತೆ ಹೊಂದಿದ್ದ ಸಹಕಾರಿ ಮುಖಂಡನಿಗೆ ಸಲ್ಲಿಸಿರುವ ದೇಶದ ಅತಿ ದೊಡ್ಡ ಗೌರವ ಎಂದೇ ಹೇಳಬಹುದಾಗಿದೆ.

# ತ್ರಿಭುವನ ಸಹಕಾರ ವಿಶ್ವವಿದ್ಯಾಲಯ, ಸಹಕಾರ ಸಂಶೋಧನೆ ಮತ್ತು ಉದ್ಯೋಗ ಸೃಷ್ಟಿಯ ತ್ರಿವೇಣಿ ಸಂಗಮ

ಭಾರತದ ಸಹಕಾರ ಚಳುವಳಿಯಲ್ಲಿ ಹೊಸತನ ಆರಂಭವಾಗಿದೆ. ಸಹಕಾರದಿಂದ ಸಮೃದ್ಧಿ ಎಂಬ ಧ್ಯೇಯದೊಂದಿಗೆ ದೇಶದ ಮೊದಲ ಸಹಕಾರ ವಿಶ್ವವಿದ್ಯಾಲಯ ಗುಜರಾತ್ ರಾಜ್ಯದ ಆನಂದ್ ಗ್ರಾಮದಲ್ಲಿ ಆರಂಭಗೊಂಡಿದೆ.

ಈಗಾಗಲೇ ಆನಂದ್‌ನಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಮ್ಯಾನೇಜ್‌ಮೆಂಟ್ ಸಂಸ್ಥೆಯಲ್ಲಿ ಕಾರ್ಯ ಆರಂಭಿಸಿರುವ ಈ ನೂತನ ಸಹಕಾರ ವಿಶ್ವವಿದ್ಯಾಲಯವು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸಲು ಅನುವಾಗುವಂತೆ ಇತ್ತೀಚೆಗೆ ಕೇಂದ್ರ ಸಹಕಾರ ಸಚಿವ ಅಮಿತ್ ಷಾ ಅವರು ಭೂಮಿ ಪೂಜೆ ನೆರವೇರಿಸಿದ್ದಾರೆ.

ಈ ಸಹಕಾರಿ ವಿಶ್ವವಿದ್ಯಾಲಯವು ದೇಶದ ಸಹಕಾರ ಅಭಿವೃದ್ಧಿಯ ಜೊತೆಗೆ ಸಂಶೋಧನೆ ಮತ್ತು ಉದ್ಯೋಗ ಸೃಷ್ಟಿಗೆ ಮುಂದಿನ ದಿನಗಳಲ್ಲಿ ಹೊಸ ಅಧ್ಯಾಯ ಬರೆಯಲಿದೆ.

ತ್ರಿಭುವನ ವಿಶ್ವವಿದ್ಯಾಲಯದ ಮುಖ್ಯ ಉದ್ದೇಶ ಶಿಕ್ಷಣ, ತರಬೇತಿ ಮತ್ತು ಸಂಶೋಧನಾ ಅವಕಾಶಗಳಿಗೆ ಆದ್ಯತೆ ನೀಡುವುದಾಗಿದೆ. (ಸಹಕಾರಿ ನಿರ್ವಹಣೆ ಹಣಕಾಸು, ಕಾನೂನು ಮತ್ತು ಗ್ರಾಮೀಣ ಅಭಿವೃದ್ಧಿ).

ಮುಂಬರುವ ದಿನಗಳಲ್ಲಿ ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಯುವಜನತೆಗೆ ಹೊಸ ಉದ್ಯೋಗ ಅವಕಾಶಗಳು ಸೃಷ್ಟಿಯಾಗಲು ಸಹಕಾರ ವಿಶ್ವವಿದ್ಯಾಲಯದ ಮೊದಲ ಆದ್ಯತೆಯಾಗಿದೆ.

ಸ್ವಾತಂತ್ರ್ಯ ಹೋರಾಟಗಾರ ರೈತ ಮುಖಂಡ ತ್ರಿಭುವನದಾಸ್ ಕಿಶಿ ಬಾಯ್ ಪಟೇಲ್ ಅವರ ನಾಯಕತ್ವ ದೇಶದ ಸಹಕಾರಿ ಹೈನೋದ್ಯಮ ಬೃಹದಾಕಾರವಾಗಿ ಬೆಳೆಯಲು ಕಾರಣವಾಯಿತು. ಈ ಹಿನ್ನೆಲೆಯಲ್ಲಿ ತ್ರಿಭುವನದಾಸ್ ಪಟೇಲ್ ಅವರ ಹೆಸರನ್ನು ವಿಶ್ವವಿದ್ಯಾಲಯಕ್ಕೆ ನಾಮಕರಣ ಮಾಡಿರುವುದು ಬದ್ಧತೆ ಹೊಂದಿದ್ದ ಸಹಕಾರಿ ಮುಖಂಡನಿಗೆ ಸಲ್ಲಿಸಿರುವ ದೇಶದ ಅತಿ ದೊಡ್ಡ ಗೌರವ ಎಂದೇ ಹೇಳಬಹುದಾಗಿದೆ.

ಆಗಸ್ಟ್-15 ರಂದು ದೇಶದೆಲ್ಲಡೆ ಭಾರತ ಸ್ವಾತಂತ್ರ್ಯ ಉತ್ಸವವನ್ನು ಆಚರಿಸಲಾಗುತ್ತಿದೆ. ಇದು ದೇಶದ ಜನರಲ್ಲಿ ದೇಶಭಕ್ತಿಯ ಜೊತೆಗೆ ಅಭಿವೃದ್ಧಿ ಪಥದಲ್ಲಿ ಮುನ್ನಡೆಸಲು, ಸರ್ವರೂ ಸಹ ಬಾಳ್ವೆಯಿಂದ ಉತ್ತಮ ಜೀವನ ನಡೆಸಲು ರಾಷ್ಟ್ರ ಪ್ರೇಮದ ಸಂಕೇತದ ದಿನವಾಗಿದೆ.

ಹಾಗೆಯೇ, ಇದೇ ಮಾಸದಲ್ಲಿ ಗಣೇಶ ಚತುರ್ಥಿಯನ್ನು ದೇಶದೆಲ್ಲೆಡೆ ಆಚರಿಸಲಾಗುತ್ತಿದ್ದು ಸಮಸ್ತ ಸಹಕಾರಿ ಬಂಧುಗಳಿಗೆ ಸ್ವಾತಂತ್ರ್ಯ ದಿನ ಮತ್ತು ಗಣೇಶ ಚತುರ್ಥಿಯ ಶುಭಾಶಯಗಳನ್ನು ಸಲ್ಲಿಸುತ್ತೇನೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :

**ಶ್ರೀ ಎಸ್. ಚಂದ್ರಶೇಖರ್**

ಸಂಪಾದಕರು :

**ಪ್ರಜ್ವಲ್ ಕೆ.ಎನ್.**

ಮುಖ್ಯಕಾರ್ಯನಿರ್ವಹಣಾಧಿಕಾರಿ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 126, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ ಜೆಬಿ ಕಾವಲ್, ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096

ದೂರವಾಣಿ ಸಂಖ್ಯೆ : 080–23564444 / 23464033 / 23464034

ಇ–ಮೇಲ್ : info@ksccsf.org, ksccsfltd@gmail.com, ವೆಬ್ : www.ksccsf.org

## ಸಹಕಾರ ಇಲಾಖೆ ಕಾರ್ಯದರ್ಶಿಗಳಾಗಿ ಎಸ್.ಬಿ. ಶೆಟ್ಟೆನ್ನವರ್ ಅಧಿಕಾರ ಸ್ವೀಕಾರ



ಸಹಕಾರ ಇಲಾಖೆಯ ಕಾರ್ಯದರ್ಶಿಗಳಾಗಿ ಹಿರಿಯ ಐ.ಎ.ಎಸ್. ಅಧಿಕಾರಿ ಎಸ್.ಬಿ. ಶೆಟ್ಟೆನ್ನವರ್ ಅವರು ಅಧಿಕಾರ ಸ್ವೀಕರಿಸಿದರು.

## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ



ಶ್ರೀ ಬಸವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಪತ್ತಿನ ಸಹಕಾರ ಸಂಘ ನಿ., ಸೇಡಂ, ಕಲಬುರಗಿ ಸಹಕಾರ ಸಂಘದ ಅಧ್ಯಕ್ಷರಾದ ಬಸವರಾಜ ಮಳಗಿರವರು ಹಾಗೂ ಸಂಘದ ಆಡಳಿತ ಮಂಡಳಿ ಸದಸ್ಯರುಗಳು ಶಿಕ್ಷಣ ನಿಧಿ ದೇಣಿಗೆ ಚೆಕ್ಕನ್ನು ಮುಖ್ಯಕಾರ್ಯನಿರ್ವಹಣಾಧಿಕಾರಿ ಕೆ.ಎನ್. ಪ್ರಜ್ವಲ್ ರವರಿಗೆ ನೀಡಿದ ಸಂದರ್ಭ.

**ಸುಭಾಷಿತ :** ನೀರಿನಿಂದ ಬಟ್ಟೆಗಳು, ಸತ್ಯದಿಂದ ಮನಸ್ಸು, ಅಹಿಂಸೆಯಿಂದ ಆತ್ಮ, ತಿಳುವಳಿಕೆಯಿಂದ ಬುದ್ಧಿ ನಿರ್ಮಲವಾಗುತ್ತವೆ. – ಗಾಂಧೀಜಿ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು “ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು” ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1770/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ರಾಷ್ಟ್ರೀಯ ಸಹಕಾರ ನೀತಿ – 2025 ಅನಾವರಣ

## ಸಹಕಾರ ಸಚಿವ ಅಮಿತ್ ಷಾ ಅವರ ದೂರದೃಷ್ಟಿಯ ಸಹಕಾರ ನೀತಿ

## 2034ರ ವೇಳೆಗೆ ಸಹಕಾರ ವಲಯದ ಜಿಡಿಪಿ ಪಾಲನ್ನು ಮೂರು ಪಟ್ಟು ಹೆಚ್ಚಿಸುವುದು, 50 ಕೋಟಿ ಸದಸ್ಯತ್ವ ಗುರಿ






**ದೆಹಲಿ: ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರು ನವದೆಹಲಿಯಲ್ಲಿ ರಾಷ್ಟ್ರೀಯ ಸಹಕಾರ ನೀತಿ – 2025 ಅನ್ನು ಸಹಕಾರಿಗಳ ಸಮ್ಮುಖದಲ್ಲಿ ಅನಾವರಣಗೊಳಿಸಿದರು. ನೂತನ ರಾಷ್ಟ್ರೀಯ ಸಹಕಾರ ನೀತಿಯು ಭಾರತದ ಸಹಕಾರಿ ಚಳವಳಿಗೆ ಒಂದು ಪರಿವರ್ತನಾ ಕ್ಷಣವನ್ನು ಗುರುತಿಸುತ್ತದೆ. ಈ ನೀತಿಯು ಮಹತ್ವಾಕಾಂಕ್ಷೆಯ ಗುರಿಯೊಂದಿಗೆ ವಲಯವನ್ನು ಪುನರುಜ್ಜೀವನಗೊಳಿಸುವ ಗುರಿಯನ್ನು ಹೊಂದಿದೆ. 2034ರ ವೇಳೆಗೆ ದೇಶದ GDPಗೆ ಸಹಕಾರ ಕ್ಷೇತ್ರದ ಕೊಡುಗೆಯನ್ನು ಮೂರು ಪಟ್ಟು ಹೆಚ್ಚಿಸುವುದು ಮತ್ತು 50 ಕೋಟಿ ಸಕ್ರಿಯ ಸದಸ್ಯರನ್ನು ಅದರ ವ್ಯಾಪ್ತಿಗೆ ಸೇರಿಸುವುದು ಪ್ರಮುಖವಾಗಿದೆ.**

ನೀತಿಯ ಕರಡು ರಚನೆಯ ನೇತೃತ್ವ ವಹಿಸಿದ್ದ ಮಾಜಿ ಕೇಂದ್ರ ಸಚಿವ ಸುರೇಶ್ ಪ್ರಭು ಸೇರಿದಂತೆ ವಿವಿಧ ರಾಜ್ಯಗಳ ಸಹಕಾರ ಸಚಿವರುಗಳು, ಹಿರಿಯ ಅಧಿಕಾರಿಗಳು, ಕೇಂದ್ರ ಸಹಕಾರ ಇಲಾಖೆ ಕಾರ್ಯದರ್ಶಿ ಆಶಿಶ್ ಕುಮಾರ್ ಭೂತಾನಿ ಮತ್ತಿತರ ಗಣ್ಯರನ್ನು ಉದ್ದೇಶಿಸಿ ಮಾತನಾಡಿದ ಅಮಿತ್ ಷಾ ಅವರು, ಈ ಸಹಕಾರ ನೀತಿಯು ಐತಿಹಾಸಿಕ, ದೂರದೃಷ್ಟಿಯ ಮತ್ತು ಪ್ರಧಾನಿ ನರೇಂದ್ರ ಮೋದಿಯವರ "ಸಹಕಾರದಿಂದ ಸಮೃದ್ಧಿ" ಎಂಬ ದೃಷ್ಟಿಕೋನದಲ್ಲಿ ಬೇರೂರಿದೆ ಎಂದು ಶ್ಲಾಘಿಸಿದರು.

ರಾಷ್ಟ್ರೀಯ ಸಹಕಾರ ಯೂನಿಯನ್ ಮತ್ತು ಇಫ್ಕೋ ಅಧ್ಯಕ್ಷ ದಿಲೀಪ್ ಸಂಘಾನಿ, ಇಫ್ಕೊ ವ್ಯವಸ್ಥಾಪಕ ನಿರ್ದೇಶಕರಾದ ಡಾ.ಯು.ಎಸ್. ಅವಸ್ಥಿ, ಆರ್‌ಬಿಐ ನಿರ್ದೇಶಕರಾದ ಸತೀಶ್ ಮರಾಠೆ, ಸಹಕಾರಿ ಮುಖಂಡರುಗಳಾದ ಜ್ಯೋತಿಂದ್ರ ಮೆಹ್ತಾ, ರವೀಂದ್ರ ರಾವ್, ವಿಶಾಲ್ ಸಿಂಗ್ ಮತ್ತು ಇತರ ಅನೇಕರು ಸೇರಿದಂತೆ ರಾಷ್ಟ್ರೀಯ ಸಹಕಾರಿ ಒಕ್ಕೂಟಗಳೊಂದಿಗೆ ಸಂಬಂಧಿಸಿದ ಬಹುತೇಕ ಎಲ್ಲಾ ಉನ್ನತ ಸಹಕಾರಿಗಳು ಉಪಸ್ಥಿತರಿದ್ದರು.

750 ಕ್ಕೂ ಹೆಚ್ಚು ಸಲಹೆಗಳು, 17 ಸಭೆಗಳು ಮತ್ತು ಆರ್‌ಬಿಐ ಮತ್ತು ನಬಾರ್ಡ್‌ನಿಂದ ಬಂದ ಸಲಹೆಗಳನ್ನು ಒಳಗೊಂಡ ಸಮಗ್ರ ಸಮಾಲೋಚನೆಗಳ ನಂತರ ರಚಿಸಲಾದ ಈ ನೀತಿಯು ವ್ಯಾಪಕ ಪಾಲುದಾರರ ಪಾಲ್ಗೊಳ್ಳುವಿಕೆಯನ್ನು ಪ್ರತಿಬಿಂಬಿಸುತ್ತದೆ. ಭಾರತವು 2002 ರಲ್ಲಿ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಮಾರ್ಗದರ್ಶನದಲ್ಲಿ ತನ್ನ ಮೊದಲ ಸಹಕಾರ ನೀತಿಯನ್ನು ಪರಿಚಯಿಸಿತ್ತು. ಮತ್ತು ಈಗ, 23 ವರ್ಷಗಳ ನಂತರ, ಪ್ರಧಾನಿ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ ಎರಡನೇ ನೀಲನಕ್ಷೆಯನ್ನು ರೂಪಿಸಲಾಗಿದೆ. ಇದು ದೇಶದ ಸಹಕಾರಿ ಅಭಿವೃದ್ಧಿಗೆ ಕೇಂದ್ರ ಸರ್ಕಾರವು ತನ್ನ ದೀರ್ಘಕಾಲೀನ ಬದ್ಧತೆಯನ್ನು ಒತ್ತಿಹೇಳುತ್ತದೆ ಎಂದು ಅಮಿತ್ ಶಾ ಅವರು ತಿಳಿಸಿದರು.

ಪ್ರಸ್ತುತ ಸಹಕಾರ ಚಳವಳಿಯ ಬೆಳವಣಿಗೆಯ ಜೊತೆಗೆ ಮುಂದಿನ ದಿನಗಳಲ್ಲಿ ಸಹಕಾರಿ ಸಂಘಗಳನ್ನು ಶೇಕಡಾ 30ರಷ್ಟು ಹೆಚ್ಚಿಸುವುದು, ಪ್ರತಿ ಗ್ರಾಮದಲ್ಲಿ ಕನಿಷ್ಠ ಒಂದು ಸಹಕಾರಿ ಸಂಘವನ್ನು ಸ್ಥಾಪಿಸುವುದು ಮತ್ತು ಪ್ರತಿ ತಾಲ್ಲೂಕಿಗೆ ಐದು ಮಾದರಿ ಸಹಕಾರಿ ಗ್ರಾಮಗಳನ್ನು ಅಭಿವೃದ್ಧಿಪಡಿಸುವುದು ಸೇರಿವೆ. ಸಹಕಾರಿ ಸಂಘಗಳ ವ್ಯಾಪ್ತಿಯು

ಸಾಂಪ್ರದಾಯಿಕ ಕ್ಷೇತ್ರಗಳನ್ನು ಮೀರಿ ಪ್ರವಾಸೋದ್ಯಮ, ಟ್ಯಾಕ್ಸಿ ಸೇವೆಗಳು, ಹಸಿರು ಇಂಧನ ಮತ್ತು ವಿಮೆಯಂತಹ ಕ್ಷೇತ್ರಗಳನ್ನು ಒಳಗೊಂಡಂತೆ ಬಹುಸೇವಾ ಕಾರ್ಯಗಳೊಂದಿಗೆ ವಿಸ್ತರಿಸುತ್ತದೆ. ಜೊತೆಗೆ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದರ ಮೂಲಕ ಆರ್ಥಿಕ ಸಾಮರ್ಥ್ಯವನ್ನು ವೃದ್ಧಿಸುತ್ತದೆ ಎಂದು ಅವರು ತಿಳಿಸಿದರು.

ಸಹಕಾರಿ ಸಂಘಗಳು ವೃತ್ತಿಪರ, ತಂತ್ರಜ್ಞಾನ–ಸಕ್ರಿಯ ಮತ್ತು ಸ್ವಾವಲಂಬಿಯಾಗುವುದನ್ನು ಖಚಿತಪಡಿಸಿಕೊಳ್ಳುವುದು ನೀತಿಯ ಮುಖ್ಯ ಧ್ಯೇಯಗಳಲ್ಲಿ ಒಂದಾಗಿದೆ. ಕ್ಲಸ್ಟರ್ ಆಧಾರಿತ ಮೇಲ್ವಿಚಾರಣಾ ವ್ಯವಸ್ಥೆ ಮತ್ತು ಪಾರದರ್ಶಕ ಹಣಕಾಸು ವ್ಯವಹಾರಗಳಿಗೆ ಒತ್ತು ನೀಡುವುದರಿಂದ ಸಹಕಾರ ವಲಯವನ್ನು ಹೆಚ್ಚು ಬಲಿಷ್ಠ ಮತ್ತು ಭವಿಷ್ಯಕ್ಕೆ ಅಣಿಗೊಳಿಸುವ ವಿಶಾಲ ಯೋಜನೆಯ ಭಾಗವಾಗಿದೆ ಎಂದರು.

ಲಕ್ಷಾಂತರ ಜನರಿಂದ ಸಣ್ಣ ವಂತಿಗೆಗಳನ್ನು ಒಟ್ಟುಗೂಡಿಸಿ ಬೃಹತ್ ಉದ್ಯಮಗಳನ್ನು ಸೃಷ್ಟಿಸುವ ಈ ವಲಯದ ಅಂತರ್ಗತ ಬೆಳವಣಿಗೆಯ ಮಾದರಿಯನ್ನು ಶಾ ಒತ್ತಿ ಹೇಳಿದರು. "ಭಾರತವು ಸಾಮೂಹಿಕವಾಗಿ ಬೆಳೆಯಬೇಕು. ಸಹಕಾರಿ ಮಾದರಿ ದೇಶದ 142 ಕೋಟಿ ನಾಗರಿಕರನ್ನು ಒಳಗೊಂಡ ಅಭಿವೃದ್ಧಿಯನ್ನು ಖಚಿತಪಡಿಸುತ್ತದೆ" ಎಂದು ಅವರು ಹೇಳಿದರು.

ನೂತನ ಸಹಕಾರ ನೀತಿಯಲ್ಲಿ 83 ಹೊಸ ನೀತಿ ಮಧ್ಯಸ್ಥಿಕೆಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ 58 ಪೂರ್ಣಗೊಂಡಿವೆ ಮತ್ತು 3 ಸಂಪೂರ್ಣವಾಗಿ ಅನುಷ್ಠಾನಗೊಂಡಿವೆ. ಗಮನಾರ್ಹ ಮೈಲಿಗಲ್ಲುಗಳಲ್ಲಿ 45,000 ಹೊಸ ಪ್ರಾಥಮಿಕ ಕೃಷಿ ಸಾಲ ಸಂಘಗಳ ಗಣಕೀಕರಣ ಮತ್ತು ಉನ್ನತೀಕರಣ, ಜನೌಷಧಿ ಕೇಂದ್ರಗಳ ಸ್ಥಾಪನೆ, ಪ್ಯಾಕ್ಸ್‌ಗಳ ಮೂಲಕ ಎಲ್‌ಪಿಜಿ ಸಿಲಿಂಡರ್‌ಗಳ ವಿತರಣೆ, ಪೆಟ್ರೋಲ್ ಪಂಪ್‌ಗಳು ಮತ್ತು ಪ್ರಧಾನಮಂತ್ರಿ ಸೂರ್ಯ ಘರ್, ಸೋಲಾರ್ ಬಳಕೆಯ ಯೋಜನೆಯಂತಹ ಸರ್ಕಾರಿ ಯೋಜನೆಗಳನ್ನು ನಿರ್ವಹಿಸುವಂತಹ 25 ಹೊಸ ಕ್ಷೇತ್ರಗಳಿಗೆ ಅವುಗಳ ವಿಸ್ತರಣೆ ಸೇರಿವೆ ಎಂದು ಹರ್ಷ ವ್ಯಕ್ತಪಡಿಸಿದರು.

ಶಿಕ್ಷಣ ಮತ್ತು ಮಾನವಸಂಪನ್ಮೂಲ ಕಾರ್ಯತಂತ್ರದ ಪ್ರೋತ್ಸಾಹವಾಗಿ, ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ. ಈ ವರ್ಷದ ಕೊನೆಯಲ್ಲಿ 'ಸಹಕಾರ್ ಟ್ಯಾಕ್ಸಿ' ಯೋಜನೆಯನ್ನು ಪ್ರಾರಂಭಿಸಲಾಗುವುದು. ಇದು ಚಾಲಕರಿಗೆ ಗಳಿಕೆಯ ಸಂಪೂರ್ಣ ಮಾಲೀಕತ್ವವನ್ನು ನೀಡುತ್ತದೆ ಎಂದು ತಮ್ಮ ದೂರದೃಷ್ಟಿ ಚಿಂತನೆಗಳನ್ನು ವಿವರಿಸಿದರು.

ಸಹಕಾರ ಸಂಘಗಳ ಬಗ್ಗೆ ಜನರ ಗ್ರಹಿಕೆಯಲ್ಲಿನ ಬದಲಾವಣೆಯನ್ನು ಎತ್ತಿ ತೋರಿಸುತ್ತಾ, ಸಹಕಾರಿ ಕ್ಷೇತ್ರವನ್ನು ಒಂದು ಕಾಲದಲ್ಲಿ ಹಳೆಯದೆಂದು ಹೇಗೆ ತಿರಸ್ಕರಿಸಲಾಗಿತ್ತು ಎಂಬುದನ್ನು ಶಾ ನೆನಪಿಸಿಕೊಂಡರು. "ಸಹಕಾರಕ್ಕೆ ಭವಿಷ್ಯವಿಲ್ಲ ಎಂದು ಜನರು ಹೇಳುತ್ತಿದ್ದ ಕಾಲವಿತ್ತು. ಇಂದು, ಭವಿಷ್ಯವು ಸಹಕಾರಕ್ಕೆ ಸೇರಿದೆ" ಎಂದು ಅವರು ಘೋಷಿಸಿದರು.

ಸಹಕಾರ ಸಂಸ್ಥೆಗಳಲ್ಲಿ ಸದಸ್ಯತ್ವ ಸೇರ್ಪಡೆಯಿಂದ ಹಿಡಿದು ಉದಯೋನ್ಮುಖ ಅವಕಾಶಗಳಿಗೆ ವಲಯವನ್ನು ಸಿದ್ಧಪಡಿಸುವವರೆಗೆ ನೀತಿಯನ್ನು ಮಾರ್ಗದರ್ಶಿಸುವ ಆರು ಆಧಾರಸ್ತಂಭಗಳೊಂದಿಗೆ – ಸಹಕಾರಿ ಸಂಸ್ಥೆಗಳನ್ನು ಬೆಳವಣಿಗೆಯ ಮುಖ್ಯವಾಹಿನಿಯ ಶಕ್ತಿವರ್ಧಕ ಯಂತ್ರವಾಗಿ ಮಾಡುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ. ಇದರಲ್ಲಿ ಸಹಕಾರಿ ಬ್ಯಾಂಕುಗಳಿಗೆ ಸಮಾನತೆ ಮತ್ತು ರಾಷ್ಟ್ರೀಯ ಸಹಕಾರಿ ರಫ್ತು ಲಿಮಿಟೆಡ್ ಮೂಲಕ ಅಂತರರಾಷ್ಟ್ರೀಯ ವಿಸ್ತರಣೆ ಸೇರಿವೆ ಎಂದರು.

ಹೊಸ ರಾಷ್ಟ್ರೀಯ ಸಹಕಾರ ನೀತಿ–2025 ನೀತಿಯು ದೇಶದ ಜಿಡಿಪಿಯನ್ನು ಹೆಚ್ಚಿಸುವುದರ ಬಗ್ಗೆ ಮಾತ್ರವಲ್ಲದೆ ವೈಯಕ್ತಿಕ ಸದಸ್ಯರಿಗೆ ಘನತೆ ಮತ್ತು ಸ್ವಾಭಿಮಾನವನ್ನು ಪುನಃಸ್ಥಾಪಿಸುವ ಬಗ್ಗೆಯೂ ಇದೆ ಎಂದು ಒತ್ತಿ ಹೇಳಿದರು. ಹೊಸ ನೀತಿಯು ಭಾರತದ ಸಹಕಾರಿ ವಲಯವನ್ನು "ಆತ್ಮನಿರ್ಭರ ಭಾರತ" ದ ಪರಿಕಲ್ಪನೆಯ ಅತ್ಯಗತ್ಯ ಆಧಾರಸ್ತಂಭವಾಗಿ ಇರುತ್ತದೆ. ಇದು ಮುಂದಿನ 25 ವರ್ಷಗಳ ರಾಷ್ಟ್ರೀಯ ಅಭಿವೃದ್ಧಿಯನ್ನು ರೂಪಿಸಲು ಸಜ್ಜಾಗಿದೆ ಎಂದು ಅವರು ನುಡಿದರು.



# ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕ ಬಸವೇಗೌಡರ "ಶತಮಾನದ ಸಹಕಾರ ಒಡಲ ಕೂಗು" ಪುಸ್ತಕ ಬಿಡುಗಡೆ

## ಒಡಲು ಕೂಗು ಕೃತಿ ಯುವಜನರಿಗೆ ಆದರ್ಶವಾಗಲಿದೆ : ಎಸ್.ಆರ್. ನಾಯಕ್



**ಬೆಂಗಳೂರು:** ಸಹಕಾರ ಇಲಾಖೆಯ ನಿವೃತ್ತ ಅಪರ ನಿಬಂಧಕರು, ಸಹಕಾರ ರತ್ನ ಪುರಸ್ಕೃತರೂ ಆಗಿರುವ ಬಸವೇಗೌಡ ರವರ "ಶತಮಾನದ ಸಹಕಾರ ಒಡಲ ಕೂಗು" ಪುಸ್ತಕವು ಸಹಕಾರ ಅಭಿವೃದ್ಧಿಯ ಹಿರಿತನದ ಹೂರಣವನ್ನು ಉಣಬಡಿಸುತ್ತದೆ. ಗುಣಮಟ್ಟ ಮತ್ತು ಉತ್ತಮ ಲೇಖನಗಳ ಮೂಲಕ ಯುವ ಸಹಕಾರಿಗಳಿಗೆ ಮಾರ್ಗದರ್ಶನವಾಗಲಿದೆ ಎಂದು ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಎಸ್.ಆರ್. ನಾಯಕ್ ಅವರು ಹೇಳಿದರು.

ಚಾಮರಾಜಪೇಟೆಯಲ್ಲಿ ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ ವತಿಯಿಂದ ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಬಸವೇಗೌಡರ ರಚಿಸಿರುವ ಶತಮಾನದ ಸಹಕಾರ ಒಡಲ ಕೂಗು ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು ಸಹಕಾರ ಇಲಾಖೆಯಲ್ಲಿ ಬಸವೇಗೌಡರು ಸಹಕಾರ ಇಲಾಖೆಯಲ್ಲಿ ಮೂರು ದಶಕಗಳ ಕಾಲ ಸೇವೆ ಸಲ್ಲಿಸಿ. ಅಪಾರ ಅನುಭವಗಳಿಸಿ, ಕೆಲಸದಲ್ಲಿ ಬದ್ಧತೆಗೆ ಹೆಸರಾದವರು. ಸಹಕಾರ ಇಲಾಖೆಯ ಮೂಲಕ ಅನೇಕ ಜನಪರ ಯೋಜನೆಗಳ ಅನುಷ್ಠಾನಕ್ಕೆ ಕಾರಣಕರ್ತರೂ ಆಗಿದ್ದಾರೆ. ಇವರ ಸೇವೆ ಮುಂದಿನ ಪೀಳಿಗೆ ಮಾದರಿಯಾಗಿದೆ ಎಂದು ಎಸ್.ಆರ್. ನಾಯಕ್ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

**ಸೇವೆಯ ಬಗ್ಗೆ ಶ್ಲಾಘನೆ :** ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಗುರುಸ್ವಾಮಿ ಅವರು ಶತಮಾನದ ಸಹಕಾರ ಒಡಲ ಕೂಗು ಪುಸ್ತಕ ಪರಿಚಯ ಮಾಡಿಕೊಟ್ಟರು. ಈ ಪುಸ್ತಕವನ್ನು ಬಸವೇಗೌಡ್ರು ಸಹಕಾರ ಕ್ಷೇತ್ರದ ಬಗ್ಗೆ ಅಪಾರವಾದ ಕಾಳಜಿ ಮತ್ತು ಬದ್ಧತೆಯಿಂದ ಬರೆದಿದ್ದಾರೆ. ಈ ಪುಸ್ತಕದ ಪ್ರತಿಯೊಂದು ಅಧ್ಯಯನವು ಸರಳ ಭಾಷೆಯ ಮೂಲಕ ಜನಸಾಮನ್ಯರಿಗೆ ಮನಮುಟ್ಟುವಂತೆ ಬರೆದಿದ್ದಾರೆ ಎಂದರು.



ಸಹಕಾರ ಕ್ಷೇತ್ರವು ಪ್ರಸ್ತುತ ದಿನಗಳಲ್ಲಿ ಮನುಷ್ಯನಿಗೆ ಬಹಳಷ್ಟು ಅವಶ್ಯವಾಗಿದೆ. ಪ್ರತಿಯೊಂದು ಕ್ಷೇತ್ರದಲ್ಲಿ ಸಹಕಾರ ವಲಯವು ಹೇಗೆ ತನ್ನ ಛಾಪು ಮೂಡಿಸಿದೆ ಎಂಬುದರ ಬಗ್ಗೆ ಕೃತಿಯಲ್ಲಿ ತಿಳಿಸಿದ್ದಾರೆ. ಸಹಕಾರ ಕ್ಷೇತ್ರದ ಪ್ರಸ್ತುತ ಸವಾಲುಗಳು ಮತ್ತು ಪರಿಹಾರಗಳು, ಮುಂದೆ ಸಹಕಾರ ಕ್ಷೇತ್ರವನ್ನು ಹೇಗೆ ಮುನ್ನಡೆಸಬೇಕು ಎಂಬುದರ ಬಗ್ಗೆ ಸ್ಪಷ್ಟವಾಗಿ ಬರೆದ್ದಾರೆ. ಶತಮಾನದ ಸಹಕಾರ ಒಡಲ ಕೂಗು ಪುಸ್ತಕವು ಸಹಕಾರ ವಲಯಕ್ಕೆ ಸಂಬಂಧಪಟ್ಟಂತೆ ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗೆ ಈ ಪುಸ್ತಕವು ಪೂರಕವಾಗಿ ಹಾಗೂ ಮಾರ್ಗದರ್ಶನದಂತೆ ಇದೆ.

ಪುಸ್ತಕವು ಸಹಕಾರ ವಲಯದ ಸ್ಥಿತಿಗತಿಯ ಮೇಲೆ ಬೆಳಕು ಚೆಲ್ಲುವಂತೆ ಇದೆ ಎಂದು ಸಂತಸವನ್ನು ವ್ಯಕ್ತಪಡಿಸಿದರು. ಶ್ರೀ ತ್ಯಾಗರಾಜ ಸಹಕಾರ ಬ್ಯಾಂಕ್ ಅಧ್ಯಕ್ಷರಾದ ಎಂ.ಆರ್ ವೆಂಕಟೇಶ್ ಅವರು ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆಯು ಹೀಗಾಗಲೇ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದೆ. ಇನ್ನು ಮುಂದಿನ ದಿನಗಳಲ್ಲಿ ಈ ವೇದಿಕೆಯಲ್ಲಿ ಯುವಜನತೆ ಭಾಗವಹಿಸಿ ಹಲವು ಯೋಜನೆಗಳನ್ನು ರೂಪಿಸಿ ಅವುಗಳನ್ನು ಕಾರ್ಯಗತಗೊಳಿಸಲಿ, ಬಸವೇಗೌಡರು ರಚಿಸಿರುವ ಪುಸ್ತಕವು ಉತ್ತಮ ಬರಹಗಳನ್ನು ಹೊಂದಿದೆ. ಇದು ಯುವ ಸಹಕಾರಿಗಳಿಗೆ ಮಾದರಿಯಾಗಲಿದೆ ಎಂದರು.

ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಹೆಚ್.ಎಸ್. ನಾಗರಾಜಯ್ಯ ಅವರು ಅಂತಾರಾಷ್ಟ್ರೀಯ ಸಹಕಾರ ವರ್ಷ 2025 ಆಚರಣೆಗೆ ಭಾರತದಲ್ಲಿ ಸಹಕಾರ ವಲಯದ ಸವಾಲುಗಳು ಎಂಬ ವಿಷಯದ ಕುರಿತು ಉಪನ್ಯಾಸವನ್ನು ನೀಡಿದರು. ನಂತರ ಸಂವಾದ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಶತಮಾನದ ಸಹಕಾರ ಒಡಲ ಕೂಗು ಪುಸ್ತಕದ ಲೇಖಕರು ಹಾಗೂ ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಬಸವೇಗೌಡರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಈ ಪುಸ್ತಕ ಹೊರಬರಲು ಸಹಕರಿಸಿದ ಎಲ್ಲರಿಗೂ ಧನ್ಯವಾದ ಅರ್ಪಿಸಿದರು.

ಈ ಇದೇ ವೇಳೆ ಲೇಖಕರಾದ ಬಸವೇಗೌಡರನ್ನು ಹಿರಿಯ ಸಹಕಾರಿಗಳು ಹಾಗೂ ವಿವಿಧ ಸಹಕಾರ ಸಂಘಗಳ ಪದಾಧಿಕಾರಿಗಳು ಸನ್ಮಾನಿಸಿ, ಗೌರವಿಸಿದರು. ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಶಶಿಧರ ಎಲೆ ಕಾರ್ಯಕ್ರಮದ ನಿರೂಪಣೆ ಮಾಡಿದರು. ಕಾರ್ಯಕ್ರಮದಲ್ಲಿ ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಬಿ.ಕೆ ಸುಭಾಶ್‌ಚಂದ್ರ, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆಯ ಉಪಾಧ್ಯಕ್ಷರಾದ ಶಿವರಾಜ ಪಾಟೀಲ, ಬೆಂಗಳೂರು ನಗರ ಜಿಲ್ಲಾ ಸಹಕಾರ ಯೂನಿಯನ್ ಮಾಜಿ ಅಧ್ಯಕ್ಷರಾದ ಹೆಚ್.ಟಿ. ನಾಗೇಶ್, ನಿವೃತ್ತ ಸಹಕಾರ ಸಂಘಗಳ ಜಂಟಿ ನಿಬಂಧಕರುಗಳಾದ ಪಿ.ವಿಶ್ವನಾಥ, ಸಿ.ನಿಂಗರಾಜ, ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಎ.ಆರ್ ಪುಷ್ಪಲತಾ, ಅಪೆಕ್ಸ್ ಬ್ಯಾಂಕ್ ನಿವೃತ್ತ ಹಿರಿಯ ಅಧಿಕಾರಿಗಳಾದ ಡಿ.ಟಿ ರಂಗಸ್ವಾಮಿ,. ಎಸ್.ಅಂಗಡಿ. ಸದಾಶಿವ, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆಯ ಪದಾಧಿಕಾರಿಗಳು, ಹಿರಿಯ ಸಹಕಾರಿಗಳು, ನಿವೃತ್ತ ಅಧಿಕಾರಿಗಳು ಉಪಸ್ಥಿತರಿದ್ದರು.

## ಸಹಕಾರ ಸಂಘಗಳ ನಿಬಂಧಕರ ಕಛೇರಿ ಆವರಣದಲ್ಲಿ ಸ್ವಚ್ಛತೆ ಹಾಗೂ ಗಿಡ ನೆಡುವ ಅಭಿಯಾನ





**ಬೆಂಗಳೂರು:** ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಆವರಣದಲ್ಲಿ ನಿಬಂಧಕರಾದ ಟಿ.ಎಚ್.ಎಂ. ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಅಂತಾರಾಷ್ಟ್ರೀಯ ಸಹಕಾರ ವರ್ಷ 2025ರ ಅಂಗವಾಗಿ ಸ್ವಚ್ಛತೆ ಹಾಗೂ ತಾಯಿಯ ಹೆಸರಿನಲ್ಲಿ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಅಪರ ನಿಬಂಧಕರಾದ ಹೆಚ್. ಬಾಲಶೇಖರ್, ಜಂಟಿ ನಿಬಂಧಕರುಗಳಾದ ಮಹೇಶ್ ಪಿ., ಕಲ್ಲಪ್ಪ ಓಬಣ್ಣಗೋಳ್, ಎಂ. ವೆಂಕಟೇಶ್, ಯಶಸ್ವಿನಿ ಹಾಗೂ ಉಪನಿಬಂಧಕರಾದ ಅಶ್ವಿನಿ ವೈ.ಟಿ. ಇತರರು ಉಪಸ್ಥಿತರಿದ್ದರು.

**ಕರ್ನಾಟಕ ಸರ್ಕಾರ**

## ಸಹಕಾರ ಚುನಾವಣಾ ಪ್ರಾಧಿಕಾರ

**ಟಿ.ಟಿ.ಎಂ.ಸಿ. ಕಟ್ಟಡ, 3ನೇ ಮಹಡಿ, "ಎ" ಬ್ಲಾಕ್, ಶ್ರೀ ಕೆಂಗಲ್ ಹನುಮಂತಯ್ಯ ರಸ್ತೆ, ಶಾಂತಿನಗರ, ಬೆಂಗಳೂರು–560027.**

**Email: coea-coop@karnataka.gov.in | Website: coea.karnataka.gov.in | Ph: 080-2220066/29709014**

ಸಂಖ್ಯೆ: ಸಚುಪ್ರಾ/ಆಡಳಿತ/ಚು.ಸಂ./29/2021–22 ದಿನಾಂಕ: 18.12.2021

**ವಿಷಯ : ಸಹಕಾರ ಸಂಘಗಳ/ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಗಳಿಗೆ / ಪದಾಧಿಕಾರಿಗಳ ಆಯ್ಕೆಗಳಿಗಾಗಿ ನಡೆಯುವ ಚುನಾವಣೆಗಳಲ್ಲಿ ರಿಟರ್ನಿಂಗ್ ಅಧಿಕಾರಿ, ಮತಗಟ್ಟೆ ಅಧಿಕಾರಿಗಳು, ಪರಿಶೀಲನಾಧಿಕಾರಿಗಳು ಮತ್ತು ಇತರೆ ಚುನಾವಣಾ ಸಿಬ್ಬಂದಿಗಳಿಗೆ ನೀಡುವ ಸಂಭಾವನೆಯನ್ನು ಪರಿಷ್ಕರಿಸುವ ಬಗ್ಗೆ.**

**ಉಲ್ಲೇಖ : 1) ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಆರ್ ಎಸ್.ಆರ್/ಚು.ಸಂಭಾವನೆ/ 187/2009–10 ದಿನಾಂಕ 20.01.2010.**

**2) ಈ ಕಛೇರಿಯ ಆದೇಶ ಸಂಖ್ಯೆ: ಸಚುಆ/ಚುನಾವಣೆ ಸಂಭಾವನೆ/11/2013–14 ದಿನಾಂಕ 25.07.2013.**

**3) ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ: ರಾಚುಆ/56/ಇಯುಬಿ/ 2018 ಬೆಂಗಳೂರು, ದಿನಾಂಕ 06.08.2018.**

### ಪ್ರಸ್ತಾವನೆ:

ಸಹಕಾರ ಸಂಘಗಳಿಗೆ / ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಗಳಿಗೆ ನಡೆಯುವ ಚುನಾವಣೆ ಮತ್ತು ಪದಾಧಿಕಾರಿಗಳ ಆಯ್ಕೆಗಳಿಗಾಗಿ ನಡೆಯುವ ಚುನಾವಣೆಗಳಿಗೆ ಸಂಬಂಧಿಸಿದಂತೆ ಸದರಿ ಚುನಾವಣೆಗಳಲ್ಲಿ ರಿಟರ್ನಿಂಗ್ ಅಧಿಕಾರಿ / ಸಹಾಯಕ ರಿಟರ್ನಿಂಗ್ ಅಧಿಕಾರಿ ಹಾಗೂ ಮತಗಟ್ಟೆ ಸಿಬ್ಬಂದಿಯಾಗಿ ಕರ್ತವ್ಯ ನಿರ್ವಹಿಸುವ ಅಧಿಕಾರಿ / ನೌಕರರಿಗೆ ಉಲ್ಲೇಖ(1)ರಂತೆ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರು ಪಾವತಿಸಬೇಕಾದ ಸಂಭಾವನೆ, ಪ್ರವಾಸ ಭತ್ಯೆ ಹಾಗೂ ದಿನಭತ್ಯೆ ಕುರಿತಂತೆ ಸುತ್ತೋಲೆಯನ್ನು ಹೊರಡಿಸಿದ್ದು ಸರಿಯಷ್ಟೆ.

ನಂತರ, ದಿನಾಂಕ 18.03.2013 ರಲ್ಲಿ ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗವು ಅಸ್ತಿತ್ವಕ್ಕೆ ಬಂದಿದ್ದು, ಉಲ್ಲೇಖ(2)ರಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ಕ್ಕೆ 2012ರಲ್ಲಿ ಮಾಡಲಾದ ತಿದ್ದುಪಡಿಯನ್ವಯ ಪ್ರಕರಣ 39ಎ ರೀತ್ಯಾ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 26ರ ರೀತ್ಯಾ ಸಹಕಾರ ಸಂಘಗಳಿಗೆ / ಸೌಹಾರ್ದ ಸಹಕಾರಿಗಳಿಗೆ ನಡೆಯುವ ಆಡಳಿತ ಮಂಡಲಿ ಚುನಾವಣೆ ಹಾಗೂ ಪದಾಧಿಕಾರಿಗಳ ಚುನಾವಣೆಯನ್ನು ಸಹಕಾರ ಚುನಾವಣಾ ಆಯೋಗದ ಅಧೀಕ್ಷಣೆ, ನಿಯಂತ್ರಣ ಹಾಗೂ ನಿರ್ದೇಶನದನ್ವಯ ನಡೆಸುವುದರಿಂದ ಮತದಾರರ ಪಟ್ಟಿ ಸಿದ್ದಪಡಿಸುವಿಕೆ. ಪ್ರವಾಸ ಮತ್ತು ಇತರೆ ಭತ್ಯೆಗಳು, ರಿಟರ್ನಿಂಗ್ ಅಧಿಕಾರಿ, ಸಹಾಯಕ ರಿಟರ್ನಿಂಗ್ ಅಧಿಕಾರಿ, ಅಧ್ಯಕ್ಷಾಧಿಕಾರಿ ಮತ್ತು ಇನ್ನಿತರ ಮತಗಟ್ಟೆ ಸಿಬ್ಬಂದಿಗೆ ಪಾವತಿಸಬೇಕಾದ ಸಂಭಾವನೆಯನ್ನು ಸಹಕಾರ ಚುನಾವಣಾ ಆಯೋಗವು ಗೊತ್ತುಪಡಿಸಿ ದಿನಾಂಕ 25.07.2013ರಲ್ಲಿ ಆದೇಶವನ್ನು ಹೊರಡಿಸಿರುತ್ತದೆ. ಕೇಂದ್ರ ಚುನಾವಣಾ ಆಯೋಗವು 2018ರ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಚುನಾವಣಾ ಕರ್ತವ್ಯ ನಿರ್ವಹಿಸುವ ಅಧಿಕಾರಿ/ ಸಿಬ್ಬಂದಿಗಳಿಗೆ ನೀಡುವ ಸಂಭಾವನೆಯನ್ನು ಪರಿಷ್ಕರಿಸಿರುವ ಹಿನ್ನೆಲೆಯಲ್ಲಿ ಉಲ್ಲೇಖ(3)ರಲ್ಲಿ ಕರ್ನಾಟಕ ರಾಜ್ಯ ಚುನಾವಣಾ ಆಯೋಗವು ರಾಜ್ಯದಲ್ಲಿ ಜರುಗಲಿರುವ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಚುನಾವಣಾ ಕರ್ತವ್ಯಕ್ಕೆ ನೇಮಿಸಲ್ಪಡುವ ವಿವಿಧ ಹಂತಗಳ ಅಧಿಕಾರಿ/ಸಿಬ್ಬಂದಿಗಳಿಗೆ ನೀಡುವ ಸಂಭಾವನೆಯನ್ನು ಪರಿಷ್ಕರಿಸಿ ಆದೇಶಿಸಲಾಗಿರುತ್ತದೆ.

ಅದರಂತೆ, ಪ್ರಾಧಿಕಾರದಿಂದ ಉಲ್ಲೇಖ(2)ರ ಚುನಾವಣಾ ಸಂಭಾವನೆಯ ಆದೇಶವನ್ನು ಹೊರಡಿಸಿ ಈಗಾಗಲೇ 8 ವರ್ಷಗಳು ಗತಿಸಿರುವುದರಿಂದ, ಇತ್ತೀಚಿನ ಜೀವನಾವಶ್ಯಕ ಅಗತ್ಯ ವಸ್ತುಗಳು / ಗ್ರಾಹಕ ವಸ್ತುಗಳು / ಪ್ರಯಾಣದರ ಏರಿಕೆಯನ್ನು ಗಮನದಲ್ಲಿಟ್ಟುಕೊಂಡು ರಿಟರ್ನಿಂಗ್ ಅಧಿಕಾರಿ / ಸಹಾಯಕ ರಿಟರ್ನಿಂಗ್ ಅಧಿಕಾರಿ / ಮತಗಟ್ಟೆ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಈ ಕಛೇರಿಯ ಆದೇಶದಂತೆ ನೀಡುತ್ತಿರುವ ಸಂಭಾವನೆಯನ್ನು ಪರಿಷ್ಕರಿಸುವ ಅವಶ್ಯಕತೆ ಇದೆ ಎಂಬುದನ್ನು ಮನಗಂಡು, ಸಂಭಾವನೆಯನ್ನು ಪರಿಷ್ಕರಿಸುವ ಕುರಿತು ಈ ಕೆಳಕಂಡಂತೆ ಆದೇಶಿಸಲಾಗಿದೆ.

### ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ಹಾಗೂ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಬಿ ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ 14ಎಎ ರೀತ್ಯಾ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಡಾ: ಎನ್.ಎಸ್. ಚನ್ನಪ್ಪಗೌಡ, ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಆದ ನಾನು, ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ / ಪದಾಧಿಕಾರಿಗಳ ಚುನಾವಣೆಗಳ ಸಂಬಂಧ ನೇಮಕವಾಗುವ ರಿಟರ್ನಿಂಗ್ ಅಧಿಕಾರಿ / ಸಹಾಯಕ ರಿಟರ್ನಿಂಗ್ ಅಧಿಕಾರಿ, ಮತಗಟ್ಟೆ ಅಧಿಕಾರಿ / ಸಿಬ್ಬಂದಿಗಳಿಗೆ / ಪರಿಶೀಲನಾಧಿಕಾರಿಗೆ ನೀಡಬೇಕಾದ ಸಂಭಾವನೆಯನ್ನು ಈ ಕೆಳಗಿನಂತೆ ಪರಿಷ್ಕರಿಸಿ ಆದೇಶಿಸಿರುತ್ತೇನೆ. ಈ ಆದೇಶವು ಕೂಡಲೇ ಜಾರಿಗೆ ಬಂದಿದ್ದು, ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.

**(ಅ). ಆಡಳಿತ ಮಂಡಲಿ ಸಾಮಾನ್ಯ ಚುನಾವಣೆ ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಯ ಪರಿಷ್ಕೃತ ಚುನಾವಣಾ ಸಂಭಾವನೆ. (ರೂ.ಗಳಲ್ಲಿ)**

| ಕ್ರ.ಸಂ. | ವರ್ಗ | ಸಂಘದಲ್ಲಿನ ಅರ್ಹ ಬಿಡಿ ಸದಸ್ಯರ ಸಂಖ್ಯೆ | ರಿಟರ್ನಿಂಗ್ ಅಧಿಕಾರಿ | ಸಹಾಯಕ ರಿಟರ್ನಿಂಗ್ ಅಧಿಕಾರಿ | ಅಧ್ಯಕ್ಷಾಧಿಕಾರಿ | ಮತಗಟ್ಟೆ ಅಧಿಕಾರಿ/ ಸಿಬ್ಬಂದಿ | ಸಹಾಯಕ 'ಡಿ' ಗ್ರೂಪ್ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | ಪ್ರಾಥಮಿಕ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು | 1000ಕ್ಕಿಂತ ಕಡಿಮೆ | 1500 | 900 | 850 | 750 | 500 |
| | | 1000 ರಿಂದ 2500 ರವರೆಗೆ | 2000 | 1000 | 850 | 750 | 500 |
| | | 2500 ರಿಂದ 5000 ರವರೆಗೆ | 2500 | 1500 | 850 | 750 | 500 |
| | | 5000 ಹಾಗೂ ಮೇಲ್ಪಟ್ಟು | 3000 | 2000 | 850 | 750 | 600 |

| | | | | | | | |
|---|---|---|---|---|---|---|---|
| 2 | ಮಾಧ್ಯಮಿಕ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು | 3000 ಕ್ಕಿಂತ ಕಡಿಮೆ | 3500 | 2500 | 1500 | 1000 | 750 |
| | | 3000ಕ್ಕೆ ಮೇಲ್ಪಟ್ಟು | 4000 | 3000 | 1500 | 1000 | 750 |
| 3 | ಫೆಡರಲ್ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು | – | 4500 | 3000 | 2000 | 1500 | 750 |
| 4 | ಅಪೆಕ್ಸ್ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು | – | 5000 | 5000 | 2000 | 1500 | 750 |

ಮೇಲ್ಕಂಡ ಕೋಷ್ಟಕದಲ್ಲಿ ನಮೂದಿಸಿರುವ ಸಂಭಾವನೆಯು ಒಂದು ಸಹಕಾರ ಸಂಘ/ ಸೌಹಾರ್ದ ಸಹಕಾರಿಯ ಪೂರ್ಣ ಚುನಾವಣೆ ಪ್ರಕ್ರಿಯೆಯನ್ನು ಕೈಗೊಳ್ಳಲು ನಿಗದಿಪಡಿಸಿರುವ ಒಟ್ಟು (ಇಡಿಗಂಟು) ಮೊತ್ತವಾಗಿರುತ್ತದೆ.

**(ಆ) ಮುಂದುವರೆದು, ಚುನಾವಣೆ ಪ್ರಕ್ರಿಯೆಯಲ್ಲಿ ಮತದಾನದ ನಂತರ ನಡೆಯುವ ಮತ ಎಣಿಕೆ ಕಾರ್ಯಕ್ಕೆ ನಿಯೋಜಿಸಲ್ಪಡುವ ಚುನಾವಣಾ ಸಿಬ್ಬಂದಿಗಳು ಹಾಗೂ ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿ ಈ ಕೆಳಕಂಡಂತೆ ಸಂಭಾವನೆಯನ್ನು ಪಡೆಯಲು ಅರ್ಹರಿರುತ್ತಾರೆ.** (ರೂ.ಗಳಲ್ಲಿ)

| ಕ್ರಮ ಸಂಖ್ಯೆ | ವರ್ಗ | ರಿಟರ್ನಿಂಗ್ ಅಧಿಕಾರಿ | ಸಹಾಯಕ ರಿಟರ್ನಿಂಗ್ ಅಧಿಕಾರಿ | ಮತ ಎಣಿಕೆ ಅಧಿಕಾರಿ/ ಸಿಬ್ಬಂದಿ | ಸಹಾಯಕ 'ಡಿ' ಗ್ರೂಪ್ |
|---|---|---|---|---|---|
| 1 | 2 | 3 | 4 | 5 | 6 |
| 1 | ಪ್ರಾಥಮಿಕ/ಮಾಧ್ಯಮಿಕ/ ಫೆಡರಲ್/ ಅಪೆಕ್ಸ್ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು | 1000 | 600 | 500 | 300 |

1) ಅಲ್ಲದೆ ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿ ಹಾಗೂ ಇತರೆ ಚುನಾವಣಾ ಕಾರ್ಯನಿರತ ಸಿಬ್ಬಂದಿಗಳು ಕೆ.ಸಿ.ಎಸ್.ಆರ್. ರೀತ್ಯಾ ಪ್ರವಾಸಭತ್ಯೆ ಮತ್ತು ದಿನಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.
2) ಆದರೆ ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿ ರವರುಗಳು ಚುನಾವಣಾ ವೇಳಾ ಪಟ್ಟಿಯ ನಿಗದಿಪಡಿಸಿರುವ ಕಾರ್ಯಗಳನ್ನು ಕೈಗೊಳ್ಳಲು ಮಾತ್ರ ಚುನಾವಣಾ ವೇಳಾ ಪಟ್ಟಿಯಲ್ಲಿನ ಅವಧಿಗೆ ಸೀಮಿತವಾಗಿ ಕೆ.ಸಿಎಸ್.ಆರ್. ರೀತ್ಯಾ ಪ್ರವಾಸ ಭತ್ಯೆ ಮತ್ತು ದಿನ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.
3) ಇತರೆ ಚುನಾವಣಾ ಕಾರ್ಯನಿರತ ಸಿಬ್ಬಂದಿಗಳು ಚುನಾವಣೆ ನಡೆಯುವ ದಿನಕ್ಕೆ ಮಾತ್ರ ಕೆ.ಸಿ.ಎಸ್.ಆರ್. ರೀತ್ಯಾ ಪ್ರವಾಸ ಭತ್ಯೆ ಮತ್ತು ದಿನಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.
4) ಚುನಾವಣಾ ಕೆಲಸ ನಿರ್ವಹಿಸುವ ಸಿಬ್ಬಂದಿಗೆ ಸಂಭಾವನೆ, ಪ್ರವಾಸ ಭತ್ಯೆ ಹಾಗೂ ದಿನಭತ್ಯೆಯನ್ನು ಸಂಬಂಧಿಸಿದ ಸಹಕಾರ ಸಂಘ/ ಸೌಹಾರ್ದ ಸಹಕಾರಿಯು ಭರಿಸತಕ್ಕದಾಗಿದೆ.
5) ಪರಿಷ್ಕರಿಸಿರುವ ದರದಂತೆ ಪಡೆಯುವ ಸಂಭಾವನೆ/ ಪ್ರವಾಸ ಭತ್ಯೆ/ ದಿನಭತ್ಯೆಯನ್ನು ಹೊರತುಪಡಿಸಿ ಇನ್ನಾವುದೇ ರೂಪದಲ್ಲಿ ಸಂಭಾವನೆಯನ್ನು ಸಹಕಾರ ಸಂಘ/ ಸೌಹಾರ್ದ ಸಹಕಾರಿಗಳಿಂದ ಪಡೆಯುವಂತಿಲ್ಲ.
6) ರಿಟರ್ನಿಂಗ್ ಅಧಿಕಾರಿರವರು ಮತದಾನದ ಹಕ್ಕನ್ನು ಹೊಂದಿರುವ ಸುಮಾರು 500 ಅರ್ಹ ಸದಸ್ಯರಿಗೆ ಅನ್ವಯವಾಗುವಂತೆ ಒಂದು ಮತಗಟ್ಟೆಯಂತೆ ಮತಗಟ್ಟೆಗಳನ್ನು ಸಿದ್ಧಪಡಿಸುವುದು.

**(ಇ) ಆಕಸ್ಮಿಕವಾಗಿ ತೆರವಾಗುವ ಪದಾಧಿಕಾರಿಗಳ ಸ್ಥಾನಗಳಿಗೆ ನಡೆಯುವ ಪದಾಧಿಕಾರಿಗಳ ಚುನಾವಣೆಯ ಸಂಬಂಧ ರಿರ್ಟನಿಂಗ್ ಅಧಿಕಾರಿ ಈ ಕೆಳಕಂಡಂತೆ ಸಂಭಾವನೆಯನ್ನು ಪಡೆಯಲು ಅರ್ಹರಿರುತ್ತಾರೆ.** (ರೂ.ಗಳಲ್ಲಿ)

| ಕ್ರಮ ಸಂಖ್ಯೆ | ವರ್ಗ | ಪದಾಧಿಕಾರಿಗಳ ಚುನಾವಣೆ ಸಂಬಂಧ ರಿಟರ್ನಿಂಗ್ ಅಧಿಕಾರಿಯ ಸಂಭಾವನೆ |
|---|---|---|
| 1 | 2 | 3 |
| 1 | ಪ್ರಾಥಮಿಕ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು | 1000 |
| 2 | ಮಾಧ್ಯಮಿಕ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು | 1500 |
| 3 | ಫೆಡರಲ್ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು | 2000 |
| 4 | ಅಪೆಕ್ಸ್ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು | 2500 |

ಮೇಲ್ಕಂಡಂತೆ ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿ/ ಚುನಾವಣಾ ಕಾರ್ಯನಿರತ ಸಿಬ್ಬಂದಿಗಳಿಗೆ ನಿಗದಿಪಡಿಸಿರುವ ಸಂಭಾವನೆ / ಭತ್ಯೆಗಳನ್ನು ಹೊರೆತುಪಡಿಸಿ ಬೇರೆ ಯಾವುದೇ ರೀತಿಯಲ್ಲಿ ನಗದು ಮೊತ್ತವನ್ನು ಪಾವತಿಸಿದಲ್ಲಿ ಸದರಿ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯನ್ನು ಜವಾಬ್ದಾರರನ್ನಾಗಿ ಮಾಡಲಾಗುವುದು. ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿರವರು ನಿಗದಿಪಡಿಸಿರುವ ಮೊತ್ತಕ್ಕಿಂತ ಹೆಚ್ಚುವರಿ ಕ್ಲೇಂ ಮಾಡಿದ್ದಲ್ಲಿ, ಸದರಿ ಮೊತ್ತವನ್ನು ಪಾವತಿಸಲು ಕ್ರಮ ಕೈಗೊಂಡಿರುವ ಮುಖ್ಯಕಾರ್ಯನಿರ್ವಹಣಾಧಿಕಾರಿ ಕ್ರಮವನ್ನು ಅನುಮೋದಿಸುವ ಆಡಳಿತ ಮಂಡಳಿಯು ಸಹ ನೇರವಾಗಿ ಹೊಣೆಗಾರರಾಗುತ್ತಾರೆ.

**(ಈ) ಪ್ರಾಥಮಿಕ, ಮಾಧ್ಯಮಿಕ, ಫೆಡರಲ್ ಹಾಗೂ ಅಪೆಕ್ಸ್ ಸಹಕಾರ ಸಂಘ/ ಸೌಹಾರ್ದ ಸಹಕಾರಿಗಳ ಚುನಾವಣೆಗೆ ಸಂಬಂಧಿಸಿದಂತೆ ಮತದಾರರ ಪಟ್ಟಿ / ಭರ್ತಿ ಮಾಡಿರುವ ಡೆಲಿಗೇಟ್ ನಮೂನೆಗಳ ಪರಿಶೀಲನೆಗೆ ಪರಿಶೀಲನಾಧಿಕಾರಿಯಾಗಿ ನೇಮಕ ಮಾಡಲ್ಪಡುವ ಅಧಿಕಾರಿ/ ಸಿಬ್ಬಂದಿ ಈ ಕೆಳಕಂಡಂತೆ ಸಂಭಾವನೆಯನ್ನು ಒಟ್ಟು (ಇಡಿಗಂಟು) ಮೊತ್ತವಾಗಿ ಪಡೆಯಲು ಅರ್ಹರಿರುತ್ತಾರೆ.** (ರೂ.ಗಳಲ್ಲಿ)

| ಕ್ರಮ ಸಂಖ್ಯೆ | ವರ್ಗ | ಸಂಘದ / ಸಹಕಾರಿಯ ಸದಸ್ಯರ ಸಂಖ್ಯೆ | ಸಂಭಾವನೆ |
|---|---|---|---|
| 1 | ಪ್ರಾಥಮಿಕ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು | 1000 ಕ್ಕಿಂತ ಕಡಿಮೆ | 1000 |
| | | 1000 ರಿಂದ 4000 ರವರೆಗೆ | 2500 |
| | | 4000 ಕ್ಕಿಂತ ಮೇಲ್ಪಟ್ಟು | 3000 |
| 2 | ಮಾಧ್ಯಮಿಕ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು | | 3500 |
| 3 | ಫೆಡರಲ್ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು | | 4000 |
| 4 | ಅಪೆಕ್ಸ್ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು | | 4500 |

ಪರಿಶೀಲನಾಧಿಕಾರಿಯ ಸಂಭಾವನೆಯನ್ನು ಹೊರತುಪಡಿಸಿ ಇನ್ನಿತರರಿಗೆ ಯಾವುದೇ ಸಂಭಾವನೆಯನ್ನು ನೀಡಲು ಅವಕಾಶವಿರುವುದಿಲ್ಲ. ಒಂದು ಪಕ್ಷ ಚುನಾವಣಾಧಿಕಾರಿಗೆ ಒಂದಕ್ಕಿಂತ ಹೆಚ್ಚು ಪರಿಶೀಲನಾಧಿಕಾರಿಗಳನ್ನು ನೇಮಕ ಮಾಡುವ ಅಗತ್ಯತೆ ಇದ್ದಲ್ಲಿ ಸಹಕಾರ ಚುನಾವಣಾ ಪ್ರಾಧಿಕಾರದ ಪೂರ್ವಾನುಮತಿಯನ್ನು ಪಡೆದು ನೇಮಕ ಮಾಡುವುದು. ಸಹಕಾರ ಚುನಾವಣಾ ಪ್ರಾಧಿಕಾರದಿಂದ ಜರುಗಲಿರುವ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಚುನಾವಣೆಗೆ ಸಂಬಂಧಪಟ್ಟಂತೆ ಸುತ್ತೋಲೆ ಸಂಖ್ಯೆ : ಸಚುಆ/ಚುನಾವಣೆ/8/2014 ದಿನಾಂಕ : 18.03.2014ರಲ್ಲಿ ಚುನಾವಣಾ ಕರ್ತವ್ಯಕ್ಕಾಗಿ ನಿಯೋಜಿಸುವ ಪೊಲೀಸ್ ಸಿಬ್ಬಂದಿ / ಅಧಿಕಾರಿಗಳಿಗೆ ಶುಲ್ಕವನ್ನು ಪಾವತಿಸುವ ಸಂಬಂಧ ಸರ್ಕಾರಿ ಆದೇಶ ಸಂಖ್ಯೆ: ಹೆಚ್.ಡಿ/136/ಇ.ಎಫ್.ಎಸ್/2010 ಬೆಂಗಳೂರು, ದಿನಾಂಕ 21.08.2012ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ. ಮತ್ತು, ಸರ್ಕಾರದ ಆದೇಶ ಸಂಖ್ಯೆ : ಹೆಚ್.ಡಿ/210/ಎಸ್.ಎಸ್.ಟಿ/2016, ಬೆಂಗಳೂರು, ದಿನಾಂಕ 04.03.2014 ಗಳಲ್ಲಿ ತಿಳಿಸಲಾಗಿರುವಂತೆ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಚುನಾವಣಾ ಕರ್ತವ್ಯಕ್ಕಾಗಿ ನಿಯೋಜನೆಗೊಳ್ಳುವ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಶುಲ್ಕವನ್ನು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ. ಅದರಂತೆಯೇ ಚುನಾವಣಾ ಕರ್ತವ್ಯ ನಿರತ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಶುಲ್ಕವನ್ನು ಪಾವತಿಸತಕ್ಕದ್ದು. ಮುಂದುವರೆದು, ಸಹಕಾರ ಚುನಾವಣಾ ಕೈಪಿಡಿ–2016ರಲ್ಲಿ ತಿಳಿಸಲಾಗಿರುವ ಲೇಖನ ಸಾಮಗ್ರಿ, ಅಂಚೆವೆಚ್ಚ, ಜೆರಾಕ್ಸ್, ಪ್ಯಾಕ್ಸ್, ಮತಪೆಟ್ಟಿಗೆ ಬಾಡಿಗೆ, ಅಳಿಸಲಾಗದ ಶಾಯಿ ಇನ್ನು ಮುಂತಾದ ಸಾಮಗ್ರಿಗಳನ್ನು ನಿಯಮಾನುಸಾರ ಖರೀದಿಸುವುದು ಮತ್ತು ಖರ್ಚು–ವೆಚ್ಚಗಳನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ–14ಎಎ ರೀತ್ಯಾ ಆಯಾಯ ಸಂಘಗಳೇ ಭರಿಸತಕ್ಕದ್ದಾಗಿದೆ. ಈ ಆದೇಶದ ಮೂಲಕ ಪರಿಷ್ಕೃತಗೊಳಿಸಿರುವ ಚುನಾವಣಾ ಸಂಭಾವನೆ ದರವು ಈ ಕೂಡಲೇ ಜಾರಿಗೆ ಬರತಕ್ಕದ್ದು.

**ಸಹಿ/–**
**ಡಾ. ಎನ್.ಎಸ್. ಚನ್ನಪ್ಪಗೌಡ**
**ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು.**

**ಕರ್ನಾಟಕ ಸರ್ಕಾರ**
**(ಸಹಕಾರ ಇಲಾಖೆ)**

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–52

ಸಂಖ್ಯೆ: ಆರ್‌ಸಿಎಸ್/ಆರ್‌ಎಸ್‌ಆರ್/ಎಕ್ಸ್‌ಎಂಸಿ/158/2024–25 ದಿನಾಂಕ: 04–01–2025

**ವಿಷಯ : ಸಹಕಾರ ಸಂಘಗಳ/ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಗಳಿಗೆ / ಪದಾಧಿಕಾರಿಗಳ ಆಯ್ಕೆಗಳಿಗಾಗಿ ನಡೆಯುವ ಚುನಾವಣೆಗಳಲ್ಲಿ ರಿಟರ್ನಿಂಗ್ ಅಧಿಕಾರಿ, ಮತಗಟ್ಟೆ ಅಧಿಕಾರಿ, ಪರಿಶೀಲನಾಧಿಕಾರಿಗಳು ಮತ್ತು ಇತರೆ ಚುನಾವಣಾ ಸಿಬ್ಬಂದಿಗಳಿಗೆ ನೀಡುವ ಸಂಭಾವನೆ ಕುರಿತು.**

**ಉಲ್ಲೇಖ:**
1) **ಈ ಕಛೇರಿಯ ಸುತ್ತೋಲೆ ಸಂಖ್ಯೆ: ಆರ್‌ಎಸ್‌ಆರ್/ಚು.ಸಂಭಾವನೆ/187/2009–10, ದಿನಾಂಕ: 20.01.2010.**
2) **ಆಯುಕ್ತರು, ಸಹಕಾರ ಚುನಾವಣಾ ಆಯೋಗ, ಬೆಂಗಳೂರು ಇವರ ಆದೇಶ ಸಂ. ಸಚುಆ/ಚುನಾವಣೆ ಸಂಭಾವನೆ/11/2013–14, ದಿನಾಂಕ: 25–07–2013.**
3) **ರಾಜ್ಯ ಚುನಾವಣಾ ಆಯೋಗದ ಆದೇಶ ಸಂ.ರಾಚುಆ/56/ಇಯುಬಿ/2018, ಬೆಂಗಳೂರು, ದಿನಾಂಕ: 06.08.2018.**
4) **ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರ ಆದೇಶ ಸಂ. ಸಚುಪ್ರಾ/ಆಡಳಿತ/ಚು.ಸಂ./29/2021–22, ದಿನಾಂಕ: 18–12–2021.**

ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಗಳಿಗೆ /ಪದಾಧಿಕಾರಿಗಳ ಆಯ್ಕೆಗಳಿಗಾಗಿ ನಡೆಯುವ ಚುನಾವಣೆಗಳಿಗೆ ಸಂಬಂಧಿಸಿದಂತೆ ಸದರಿ ಚುನಾವಣೆಗಳಲ್ಲಿ ರಿಟರ್ನಿಂಗ್ ಅಧಿಕಾರಿ/ಸಹಾಯಕ ರಿಟರ್ನಿಂಗ್ ಅಧಿಕಾರಿ ಹಾಗೂ ಮತಗಟ್ಟೆ ಸಿಬ್ಬಂದಿಯಾಗಿ ಕರ್ತವ್ಯ ನಿರ್ವಹಿಸುವ ಅಧಿಕಾರಿ / ನೌಕರರಿಗೆ ಹಾಗೂ ಪರಿಶೀಲನಾಧಿಕಾರಿಗೆ ನೀಡಬೇಕಾದ ಸಂಭಾವನೆಯನ್ನು ಹಾಗೂ ಇತರೆ ಚುನಾವಣಾ ವೆಚ್ಚವನ್ನು ಪರಿಷ್ಕರಿಸಿ ಉಲ್ಲೇಖ(4) ರಲ್ಲಿ ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರು ಆದೇಶ ಹೊರಡಿಸಿರುತ್ತಾರೆ.

ಮುಂದುವರೆದು, ಉಲ್ಲೇಖ(4) ರಂತೆ ಚುನಾವಣಾ ಸಂಭಾವನೆಯನ್ನು ಪರಿಷ್ಕರಿಸಿ ನಿಗದಿಪಡಿಸಿ ಹೊರಡಿಸಿರುವ ಆದೇಶವನ್ನು ಉಲ್ಲಂಘಿಸಿ ಹೆಚ್ಚಿನ ಸಂಭಾವನೆಯನ್ನು ಪಡೆಯುತ್ತಿರುವುದಾಗಿ ಹಲವಾರು ಸಹಕಾರ ಸಂಘಗಳ ಆಡಳಿತ ಮಂಡಳಿಯವರು/ ಜನಪ್ರತಿನಿಧಿಗಳು ಇಲಾಖೆಗೆ ದೂರನ್ನು ನೀಡಿರುತ್ತಾರೆ. ಈ ರೀತಿ ಆದೇಶವನ್ನು ಮೀರಿ ಚುನಾವಣಾ ಸಂಭಾವನೆಯನ್ನು ಪಡೆಯುತ್ತಿರುವುದು ಸದರಿ ಆದೇಶದ ಉಲ್ಲಂಘನೆಯಾಗುವುದಲ್ಲದೆ, ಹಣ ದುರುಪಯೋಗ ಮಾಡಿದಂತಾಗುತ್ತದೆ. ಆದ್ದರಿಂದ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಗಳಿಗೆ / ಪದಾಧಿಕಾರಿಗಳ ಆಯ್ಕೆಗಳಿಗಾಗಿ ನಡೆಯುವ ಚುನಾವಣೆಗಳಿಗೆ ಸಂಬಂಧಿಸಿದಂತೆ ನೇಮಕಗೊಂಡ ಅಧಿಕಾರಿ/ಸಿಬಂದಿಗಳು ಸಹಕಾರ ಚುನಾವಣಾ ಪ್ರಾಧಿಕಾರದ ಉಲ್ಲೇಖ(4)ರ ಆದೇಶದಲ್ಲಿ ಚುನಾವಣಾ ಸಂಭಾವನೆಯನ್ನು ನಿಗಧಿಪಡಿಸಿರುವ ಮೊತ್ತವನ್ನು ಪಡೆಯತಕ್ಕದ್ದು. ಆದೇಶ ಮೀರಿ ಹೆಚ್ಚಿನ ಸಂಭಾವನೆಯನ್ನು ಪಡೆದಲ್ಲಿ ಅಂತಹ ಮೊತ್ತವನ್ನು ಹಣ ದುರುಪಯೋಗವೆಂದು ಪರಿಗಣಿಸಿ ವಸೂಲಾತಿಗೆ ಕ್ರಮವಿಡುವುದಲ್ಲದೆ, ಸದರಿ ಕರ್ತವ್ಯಲೋಪವೆಸಗಿದ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದೆಂದು ತಿಳಿಯತಕ್ಕದ್ದು.

**ಸಹಿ/–**
**ಟಿ.ಹೆಚ್.ಎಂ. ಕುಮಾರ್. ಭಾ.ಆ.ಸೇ.**
**ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು**

# ನಾಡಿನಾದ್ಯಂತ ಸಡಗರ ಸಂಭ್ರಮದ ಗಣೇಶೋತ್ಸವ





ಗಣೇಶ ಹಬ್ಬಕ್ಕೆ ಹಿಂದೂ ಸಂಸ್ಕೃತಿಯಲ್ಲಿ ಒಂದು ವಿಶೇಷ ಸ್ಥಾನವಿದೆ. ಪ್ರಥಮ ಪೂಜಿತ ಗಜಮುಖನನ್ನು ಆರಾಧಿಸಿದ ನಂತರವೇ ಪ್ರತಿಯೊಂದು ಶುಭಕಾರ್ಯಕ್ಕೂ ಚಾಲನೆ ನೀಡಲಾಗುತ್ತದೆ.

ಗಣೇಶನ ಚತುರ್ಥಿ ವಿಶೇಷವಾಗಿ ಮುದ್ದು ಮಕ್ಕಳು ಹಾಗೂ ಪ್ರಕೃತಿಯನ್ನು ಏಕಕಾಲಕ್ಕೆ ಪೂಜಿಸುವ ಹಬ್ಬವಾಗಿದೆ. ಈ ಹಬ್ಬದಲ್ಲಿ ಪುಟ್ಟ ಗಣೇಶನಿಗೆ ಪೂಜೆ ಸಲ್ಲಿಸುವುದು ಹಾಗೂ ಅವನಿಗೆ ಇಷ್ಟವಿರುವ ವೈವಿಧ್ಯಮಯ ಕಜ್ಜಾಯ, ತಿಂಡಿ ತಿನಿಸುಗಳನ್ನು ತಯಾರಿಸಿ ಬಡಿಸುವುದು ಮನೆಯ ಮುದ್ದು ಮಕ್ಕಳ ಇಷ್ಟಾರ್ಥಗಳನ್ನು ಈಡೇರಿಸಿ ಅವರನ್ನು ಖುಷಿ ಪಡಿಸುವ ಸಂಕೇತವಾಗಿದ್ದು ಆ ಮೂಲಕ ಮನೆಮಂದಿಯಲ್ಲಾ ಸಂಭ್ರಮಿಸುವುದೇ ಈ ಹಬ್ಬದ ವಿಶೇಷವಾಗಿದೆ. ಆನೆಯ ತಲೆಯನ್ನು ಹೊಂದಿರುವ ಗಣೇಶ ಪ್ರಕೃತಿಯನ್ನು ಪೂಜಿಸುವ ಸಂದೇಶ ಸಾರುವ ಸಂಕೇತವಾಗಿದೆ. ಮಕ್ಕಳನ್ನು ಮತ್ತು ಪ್ರಕೃತಿಯನ್ನು ಏಕ ಕಾಲಕ್ಕೆ ಪೂಜಿಸುವುದೆ ಗಣೇಶ ಚತುರ್ಥಿಯ ವಿಶೇಷವಾಗಿದೆ. ಜಾತಿ ಮತ ಧರ್ಮ, ಭಾಷೆ, ಬಣ್ಣ ಮೀರಿ ಗಣೇಶ ಚತುರ್ಥಿಯನ್ನು ಜಗತ್ತಿನ ನಾನಾ ಭಾಗಗಳಲ್ಲಿ ಸಡಗರ ಸಂಭ್ರಮಗಳಿಂದ ಆಚರಿಸಲಾಗುತ್ತೆ. ಭಾರತವಲ್ಲದೆ ಇಂಡೋನೇಷ್ಯಾ ಸಹಿತ ಹಲವಾರು ದೇಶಗಳಲ್ಲಿ ಗಣೇಶ ಹಬ್ಬ ಆಚರಿಸಲಾಗುತ್ತದೆ.

ಪ್ರತಿ ವರ್ಷದಂತೆ ಈ ಬಾರಿಯೂ ಕೂಡ ಹಬ್ಬದ ಸಡಗರಕ್ಕೆ ಒಂದೆಡೆಯಿಂದ ತಳಿರು ತೋರಣದ ಬಿರುಸು ಪ್ರಾರಂಭಗೊಂಡಿದ್ದರೆ, ಮತ್ತೊಂದೆಡೆಯಿಂದ ತಿಂಗಳುಗಟ್ಟಲೆಯ ಪೂಜೆ ಸ್ವೀಕರಿಸಲು ಗಣೇಶನ ವಿಗ್ರಹ ಕೂಡ ಭರದಿಂದ ಸಿದ್ಧಗೊಳ್ಳುತ್ತಿದೆ. ಗಣೇಶ ಹಬ್ಬದ ವಿಶೇಷತೆಯೇ ಅದು. ಎಲ್ಲಾ ಹಬ್ಬಗಳ ಆಚರಣೆ ಹೆಚ್ಚೆಂದರೆ ಮೂರ್ನಾಲ್ಕು ದಿನಗಳಿದ್ದರೆ ಈ ಗಣೇಶ ಹಬ್ಬವು ಕೆಲವೆಡೆ ಬರೋಬ್ಬರಿ ಒಂದು ತಿಂಗಳವರೆಗೂ ಚಾಲ್ತಿಯಲ್ಲಿರುತ್ತದೆ. ಮಣ್ಣಿನ ಗಣಪನಿಗೆ ಅಲಂಕಾರ ಮಾಡಿ ಅದರ ಮುಂದೆ ನಮ್ಮೆಲ್ಲರ ತಾಪತ್ರಯಗಳನ್ನು ತಿಳಿಸಿ ಮನಸ್ಸು ಹಗುರಾಗಿಸಿ ಕೊನೆಗೆ ಆತನನ್ನು ನೀರಲ್ಲಿ ಲೀನಗೊಳಿಸುವುದು ಗಣೇಶ ಹಬ್ಬದ ವೈಶಿಷ್ಟ್ಯ.

### ಗಣೇಶನ ಪೂಜೆಗೆ ಬಳಸುವ ಹೂವುಗಳು

ಹೂವಿಲ್ಲದೆ ಪೂಜೆಯಿಲ್ಲ. ಹೂವಿನ ಜತೆಗೆ ಭಕ್ತಿಯ ಅರ್ಪಣೆ ಮಾಡುವವರು ತಮ್ಮ ಇಷ್ಟ ದೇವತೆಯನ್ನು ಕುಸುಮಗಳಿಂದ ಅಲಂಕರಿಸುತ್ತಾರೆ. ಆದರೆ ಯಾವ ದೇವರ ಪೂಜೆಗೆ ಯಾವ ಹೂವು ಶ್ರೇಷ್ಠ ಎಂದು ಹೊಸದಾಗಿ ಪೂಜೆ ಮಾಡುವವರು ಗೊಂದಲಕ್ಕೆ ಒಳಗಾಗುವ ಅಗತ್ಯವಿಲ್ಲ. ಇತ್ತೀಚೆಗೆ ಯಾವ ಹಬ್ಬಕ್ಕೆ ಯಾವ ಹೂವು ಸೂಕ್ತ ಎನ್ನುವ ವಿವರವಷ್ಟೆ ಅಲ್ಲ, ಹೂವುಗಳು ಕೂಡ ಮಾರುಕಟ್ಟೆಯಲ್ಲೇ ಸಿಗುತ್ತವೆ. ಇದೀಗ ಗಣೇಶ ಚತುರ್ಥಿ ಹಬ್ಬಕ್ಕೂ ಅಂಥದ್ದೇ ವಿಧಾನ ಅನುಸರಿಸಬಹುದು. ಎಕ್ಕದ ಹೂವು ಗಣೇಶ ಪೂಜೆಗೆ ಶ್ರೇಷ್ಠ ಎಂದೇ ಗಣೇಶ ಚೌತಿಯ ದಿನ ಎಲ್ಲರ ಮನೆಯ ಪೂಜೆಯಲ್ಲೂ ಈ ಹೂವಿಗೆ ಪ್ರಮುಖ ಸ್ಥಾನ. ಕೇವಲ ಪತ್ರೆ, ಗರಿಕೆಯಷ್ಟೆ ಅಲ್ಲ, ಇನ್ನೂ ಹಲವಾರು ಹೂವುಗಳನ್ನು ಗಣೇಶನ ಪೂಜೆಗೆ ಬಳಸುವ ಪದ್ಧತಿ ಇದೆ.

**ಎಕ್ಕ :** ಗಣೇಶ ಪೂಜೆಗೆ ಶ್ರೇಷ್ಠವಾದ ಹೂವು ಎಕ್ಕ. ಎಕ್ಕದ ಬಿಡಿ ಹೂವು, ಮಾಲೆಗಳನ್ನು ಪ್ರತಿ ಮನೆಯಲ್ಲೂ ಗಣೇಶನ ಪೂಜೆಗೆ ಬಳಸುತ್ತಾರೆ.

**ವಕುಲಾ :** ಅತ್ಯುತ್ತಮ ಪರಿಮಳ ಹೊಂದಿರುವ ಇದು ಮನಸ್ಸಿಗೆ ಶಾಂತಿ ನೀಡುತ್ತದೆ.

**ದಾಸವಾಳ :** ವರ್ಷಪೂರ್ತಿ ಮನೆಯ ಅಂಗಳದಲ್ಲಿ ಅರಳುವ ಇದು ಏಳಿಗೆಯನ್ನು ಸೂಚಿಸಿ ಶತ್ರುನಾಶವನ್ನು ಬಿಂಬಿಸುತ್ತದೆ. ದಾಸವಾಳವೆಂದರೆ ಗಣೇಶನಿಗೆ ಪ್ರಿಯವಂತೆ.

**ಕದಂಬ :** ಅದ್ಭುತ ಸುವಾಸನೆಯಿಂದ ಸೆಳೆಯುವ ಇದು ಔಷಧೀಯ ಸಸ್ಯವೂ ಹೌದು. ಅಲ್ಸರ್, ಕೆಮ್ಮು, ಜ್ವರದ ಚಿಕಿತ್ಸೆಗೆ ಬಳಸುತ್ತಾರೆ.

**ದಾಳಿಂಬೆ ಹೂವು :** ಎಲೆ, ಹಣ್ಣು, ಬೀಜ ಎಲ್ಲವೂ ಔಷಧೀಯ ಗುಣ ಹೊಂದಿರುವ ದಾಳಿಂಬೆ ಹೂವು ನೋಡಲಿಕ್ಕೆ ಸುಂದರವಷ್ಟೆ ಅಲ್ಲ, ಪೂಜನೀಯ.

**ಕರವೀರ :** ಗಾಢವಾದ ಸುವಾಸನೆ ಇರುವ ಇದು ಬಹುತೇಕ ಎಲ್ಲಾ ಸಮಯದಲ್ಲೂ ಅರಳುತ್ತದೆ. ಎಲ್ಲ ದೇವರ ಮುಡಿಗೇರುವ ಇದು ಗಣೇಶ ಪೂಜೆಗೆ ಕೂಡ ಶ್ರೇಷ್ಠ. ಹಲವಾರು ಬಣ್ಣಗಳಲ್ಲಿ ಗಮನ ಸೆಳೆಯುತ್ತದೆ.

**ಕಮಲ :** ಎಲ್ಲ ದೇವರ ಪೂಜೆಗೂ ಸಲ್ಲುವಂಥದ್ದು. ಅದರಲ್ಲೂ



ಗುಲಾಬಿ ಬಣ್ಣದ ಕಮಲವನ್ನು ಗಣೇಶನ ಪೂಜೆಗೆ ಅರ್ಪಿಸುವ ಸಂಪ್ರದಾಯವಿದೆ.

**ಸಂಪಿಗೆ :** ಪರಿಮಳದಿಂದಲೇ ಗಮನ ಸೆಳೆಯುವ ಇದು ಗಣೇಶ ಪೂಜೆಗೆ ಶ್ರೇಷ್ಠ.

**ಶಂಖಪುಷ್ಪ :** ಬಳ್ಳಿಯಾಗಿ ಹಬ್ಬುವ ಬಣ್ಣಬಣ್ಣದ ಶಂಖಪುಷ್ಪ ಔಷಧೀಯ ಸಸ್ಯವೂ ಹೌದು. ಇದು ಗಣೇಶನ ಮುಡಿಗೆ ಏರುವ ಈ ಹೂವು.

**ಚಂಡು ಹೂವು :** ಸಾಂಪ್ರದಾಯಿಕ ಪೂಜೆ ಅಥವಾ ಹೂವಿನ ಅಲಂಕಾರ ಎಂದರೆ ಚಂಡು ಹೂವಿಗೆ ಪ್ರಧಾನ ಸ್ಥಾನ. ದೇವಾಲಯಗಳಲ್ಲಿ ಅಲಂಕಾರಕ್ಕೆ ಈ ಹೂವನ್ನು ಹೆಚ್ಚು ಉಪಯೋಗಿಸುತ್ತಾರೆ.

ಇವಲ್ಲದೆ ಜಾಜಿ ಮಲ್ಲಿಗೆ, ಸೌಗಂಧಿಕಾ ಮತ್ತಿತರ ಹೂವುಗಳನ್ನು ದರ್ಬೆ, ಕೇದಿಗೆ ಪತ್ರೆಗಳೊಂದಿಗೆ ಪೂಜೆ ಮಾಡುವ ಅಭ್ಯಾಸ ಇದೆ. ಎಲ್ಲಕ್ಕಿಂತ ಮುಖ್ಯವಾಗಿ ಭಕ್ತರು ತಮ್ಮತಮ್ಮ ನಂಬಿಕೆಗೆ ತಕ್ಕಂತೆ ಆಯಾ ಪ್ರದೇಶದಲ್ಲಿ ಕೆಲವು ಹೂವುಗಳು ವಿಘ್ನ ವಿನಾಶಕ ವಿನಾಯಕನಿಗೆ ಶ್ರೇಷ್ಠ ಎಂದು ನಂಬುತ್ತಾರೆ. ಭಕ್ತಿಯೊಂದಿದ್ದರೆ ಯಾವುದೋ ಒಂದು ಕಾಡು ಹೂವು ಕೂಡ ದೇವರ ಮುಡಿಗೇರಿ ಸಾರ್ಥಕ ಭಾವ ಅನುಭವಿಸುತ್ತದೆ.

### ಪರಿಸರ ಸ್ನೇಹಿ ಗಣೇಶೋತ್ಸವಕ್ಕೆ ಒತ್ತು

ಗಣೇಶೋತ್ಸವದ ಸಮಯದಲ್ಲಿ ಪರಿಸರ ಸ್ನೇಹಿ ಗಣೇಶ ಮೂರ್ತಿ ಪೂಜಿಸಿ ಎಂಬ ಕೂಗು ಎಲ್ಲಡೆಯಿಂದ ಕೇಳಿಬರುತ್ತದೆ. ಪರಿಸರ ಮಾಲಿನ್ಯದಿಂದ ಪ್ರತಿನಿತ್ಯ ಜನ ಜಾನುವಾರುಗಳು, ಪಶು, ಪಕ್ಷಿ, ಗಿಡಮರಗಳು ಅನುಭವಿಸುತ್ತಿರುವ ಸಮಸ್ಯೆಯನ್ನು ಮನಗಂಡ ಸರ್ಕಾರ ಪಿಒಪಿ ಗಣೇಶ ಮೂರ್ತಿ ತಯಾರಿಸುವುದು ಹಾಗೂ ಪೂಜೆ ಮಾಡುವುದಕ್ಕೆ ನಿಷೇದ ವಿಧಿಸಿದೆ. ಪಿಒಪಿ ಗಣೇಶ ಮೂರ್ತಿ ತಯಾರಿಸುವವರು ಹಾಗೂ ಮಾರುವವರ ವಿರುದ್ದ ಕಾನೂನು ಪ್ರಕಾರ ಕ್ರಮಕೈಗೊಳ್ಳುವುದಾಗಿ ಸರ್ಕಾರ ಎಚ್ಚರಿಕೆ ನೀಡಿದೆ.

ಸಾರ್ವಜನಿಕ ಗಣೇಶೋತ್ಸವ, ಸಂಘ–ಸಂಸ್ಥೆಗಳು, ದೇಗುಲಗಳಲ್ಲಿ ಇರಿಸುವ ಗಣೇಶನ ಮೂರ್ತಿ ಗಾತ್ರ ದೊಡ್ಡದಾಗಿರಬೇಕೆಂದು ಖರೀದಿದಾರರು ಬಯಸುತ್ತಾರೆ. ಮಣ್ಣಿನ ಮೂರ್ತಿಗಳು ಹೆಚ್ಚು ತೂಕವಿರುವುದರಿಂದ ಸಾಗಾಟ, ನಿರ್ವಹಣೆ ಕಷ್ಟ. ಪೇಪರ್ ಗಣೇಶ ಮೂರ್ತಿಗಳು ಹಗುರವಿರುವ ಜತೆಗೆ ಪರಿಸರ ಸ್ನೇಹಿಯೂ ಆಗಿವೆ.

ಹೀಗಾಗಿ ಇವುಗಳ ಖರೀದಿಗೆ ಹಲವರು ಆಸಕ್ತಿ ತೋರುತ್ತಿದ್ದಾರೆ. ಕಳೆದ ವರ್ಷ ಕೆಲ ವ್ಯಾಪಾರಿಗಳು ಪೇಪರ್ ಗಣೇಶನ ಮೂರ್ತಿಗಳನ್ನು ಹೊರ ರಾಜ್ಯಗಳಿಂದ ತರಿಸಿದ್ದರು. ಈ ಬಾರಿ ಸ್ಥಳೀಯವಾಗಿ ಈ ಮಾದರಿಯ ಮೂರ್ತಿಗಳನ್ನು ತಯಾರಿಸಲಾಗುತ್ತಿದೆ. ಗಣೇಶ ಮೂರ್ತಿ ತಯಾರಕರು ಕೂಡ ಇದರತ್ತ ಹೆಚ್ಚು ಆಸಕ್ತಿವಹಿಸುತ್ತಿದ್ದಾರೆ.

ಮರಗೆಣಸು, ಪೇಪರ್ ಬಳಸಿ ಪೇಪರ್ ಗಣೇಶನ ಮೂರ್ತಿಗಳನ್ನು ತಯಾರಿಸಲಾಗುತ್ತದೆ. ಇವುಗಳು ನೀರಿನಲ್ಲಿಹಾಕಿದಾಗ ಸುಲಭವಾಗಿ ಕರಗುತ್ತದೆ. ಮೀನುಗಳಿಗೂ ಆಹಾರವಾಗುತ್ತದೆ. ಪರಿಸರಸ್ನೇಹಿಯೂ ಆಗಿದೆ. "ಸುಮಾರು 8–10 ಅಡಿಯ ಪೇಪರ್ ಗಣಪನ ಮೂರ್ತಿಗಳ ದರ 20 ಸಾವಿರ ರೂ.ವರೆಗೆ ಇದೆ" ಎಂದು ಆರ್.ವಿ. ರಸ್ತೆಯ (ಚಿಕ್ಕಮಾವಳ್ಳಿ) ವಿನಾಯಕ ಆಯಂಡ್ ಕೋ ಸಂಸ್ಥೆಯ ಮಾಲೀಕರಾದ ಎಂ.ಶ್ರೀನಿವಾಸ್ ತಿಳಿಸಿದರು. "ಗಣೇಶೋತ್ಸವ ಸಮಿತಿಗಳು ದೊಡ್ಡದಾದ ಮೂರ್ತಿ ಜೊತೆಗೆ ಪುಟ್ಟದಾದ ಮಣ್ಣಿನ ಮೂರ್ತಿಯನ್ನು ಪ್ರತಿಷ್ಠಾಪಿಸುವುದು ವಾಡಿಕೆ. ಪೇಪರ್ ಗಣೇಶನನ್ನು ಇರಿಸಿದಲ್ಲಿ ಜಲಮೂಲಗಳು ಕಲುಷಿತವಾಗುವುದು ತಪ್ಪಲಿದೆ. ಜಲಮೂಲಗಳಿಗೆ ಹಾನಿಯಾಗಲಿದೆ ಎಂಬ ಜಾಗೃತಿ ಎಲ್ಲೆಡೆ ಮೂಡಿರುವುದರಿಂದ ಪರಿಸರಸ್ನೇಹಿ ಮಣ್ಣಿನ ಗಣಪತಿ ಮೂರ್ತಿಗೂ ಬೇಡಿಕೆ ಇದೆ.

### ತಯಾರಿಕೆ ಹೇಗೆ?

ಪೇಪರ್ ಗಣೇಶ ಮೂರ್ತಿ ಸಿದ್ಧಪಡಿಸಲು ಮರಗೆಣಸಿನ ಪುಡಿಯನ್ನು ಬಿಸಿ ನೀರಿನಲ್ಲಿ ಕುದಿಸಿ, ಪೇಸ್ಟ್ ಮಾಡಿಕೊಳ್ಳಲಾಗುತ್ತದೆ. ಜೊತೆಗೆ ನ್ಯೂಸ್‌ಪೇಪರ್‌ನ್ನು ನೆನೆಸಿ, ಗ್ರೈಂಡರ್‌ನಲ್ಲಿ ರುಬ್ಬಿಕೊಳ್ಳಲಾಗುತ್ತದೆ. ನಂತರ ಎರಡೂ ಪೇಸ್ಟ್‌ಗಳಿಗೆ ಚಾಕ್ ಪೌಡರ್ ಮಿಶ್ರಣ ಮಾಡಲಾಗುತ್ತದೆ. ಬಳಿಕ ಗಣೇಶನ ಮುಖ, ಕಿವಿ, ಕಣ್ಣುಗಳ ವಿನ್ಯಾಸ ಮಾಡಲಾಗುತ್ತದೆ.

ಬಿಸಿಲಲ್ಲಿ ಒಣಗಿಸಿದ ಬಳಿಕ ಕೈ–ಕಾಲುಗಳನ್ನು ಜೋಡಿಸಲಾಗುತ್ತದೆ.

ಸುಮಾರು 5 ಅಡಿ ಎತ್ತರದ ಗಣಪತಿ ಮೂರ್ತಿಯನ್ನು ತಯಾರಿಸಲು 15–20 ಕೆ.ಜಿ ಮರಗೆಣಸು ಹಾಗೂ 10–15 ಕೆ.ಜಿಯಷ್ಟು ಪೇಪರ್ ಬೇಕಾಗುತ್ತದೆ. ಈ ಮೊದಲು ತಮಿಳುನಾಡು ಸೇರಿದಂತೆ ಬೇರೆ ಬೇರೆ ರಾಜ್ಯಗಳಿಂದ ಪೇಪರ್ ಗಣಪತಿಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಈ ವರ್ಷ ಅಲ್ಲಿಂದಲೇ ಕಾರ್ಮಿಕರನ್ನು ಕರೆಸಿಕೊಂಡು ನಾವೇ ಪೇಪರ್ ಗಣೇಶ ಮೂರ್ತಿಗಳನ್ನು ತಯಾರಿಸುತ್ತಿದ್ದೇವೆ,' ಎಂದು ಆರ್.ವಿ.ರಸ್ತೆಯ ಶ್ರೀ ವಿನಾಯಕ ಆಂಡ್ ಕೋ. ಸಂಸ್ಥೆಯ ಎಂ.ಶ್ರೀನಿವಾಸ್ ಹೇಳುತ್ತಾರೆ.

### ನಾನಾ ವಿನ್ಯಾಸದ ಮೂರ್ತಿಗಳು

ಒಡಿಶಾ ಶೈಲಿಯ ಗಣಪ, ಮುಂಬಯಿಯ 'ಲಾಲ್‌ಬಾಗ್ ರಾಜ', ವಿಳೀಪುರಂನ 'ಪೇಪರ್ ಗಣಪ', ಪಾಂಡಿಚೇರಿಯ 'ಹರಳು ಗಣಪ', ಪರಿಸರ ಪೂರಕ 'ಜೇಡಿಮಣ್ಣಿನ ಗಣಪ' ಮೂರ್ತಿಗಳಿಗೆ ಬೇಡಿಕೆ ಇದೆ. ಇವುಗಳನ್ನು ಪಾಂಡಿಚೇರಿ, ವಿಳೀಪುರಂ, ಕೃಷ್ಣಗಿರಿ, ಬಾಂಬೆ, ಕೊಲ್ಲಾಪುರ, ಕೋಲ್ಕೊತ್ತಾ, ಹೈದರಾಬಾದ್ ಮತ್ತಿತರ ಕಡೆಗಳಿಂದ ತರಿಸಲಾಗುತ್ತಿದೆ.

ಕೆಲವನ್ನು ಬೆಂಗಳೂರಿನಲ್ಲೂ ತಯಾರಿಸಲಾಗುತ್ತಿದೆ. ಗಜಗೌರಿ, ಮಂಗಳಗೌರಿ, ಮಡಿಗೌರಿ, ಮೈಸೂರು ಗೌರಿ, ಬೆಂಗಳೂರು ಗೌರಿ ಮೂರ್ತಿಗಳು ತಯಾರಾಗುತ್ತಿವೆ. ಕುಂಬಳಗೋಡು, ಆರ್.ವಿ. ರಸ್ತೆ, ಟ್ಯಾನರಿ ರಸ್ತೆ, ಶಿವಾಜಿನಗರ, ಬಾಣಸವಾಡಿ, ಹಲಸೂರು, ಮಲ್ಲೇಶ್ವರ, ಯಶವಂತಪುರ ಸೇರಿದಂತೆ ನಾನಾ ಸ್ಥಳಗಳಲ್ಲಿ ಗೌರಿ–ಗಣೇಶನ ಮೂರ್ತಿಗಳ ತಯಾರಿ ಹಾಗೂ ಮಾರಾಟ ನಡೆಯುತ್ತದೆ.

### ಅಮೆರಿಕಕ್ಕೆ ಮಣ್ಣಿನ ಮೂರ್ತಿಗಳ ರವಾನೆ

ಅಮೆರಿಕದಲ್ಲಿ ಹಲವು ಕನ್ನಡ ಸಂಸ್ಥೆಗಳಿದ್ದು, ಪ್ರತಿ ವರ್ಷ ಮಣ್ಣಿನ ಮೂರ್ತಿಗಳಿಗೆ ಬೇಡಿಕೆ ಬರುತ್ತದೆ. ಅದೇ ರೀತಿ ಈ ಬಾರಿಯೂ 9–10 ಇಂಚಿನ 3 ಸಾವಿರ ಮೂರ್ತಿಗಳನ್ನು ನ್ಯೂಯಾರ್ಕ್‌ಗೆ ಕಳುಹಿಸಿಕೊಡಲಾಗಿದೆ" ಎಂದು ಆರ್.ವಿ. ರಸ್ತೆಯ (ಚಿಕ್ಕಮಾವಳ್ಳಿ) ವಿನಾಯಕ ಆಂಡ್ ಕೋ ಸಂಸ್ಥೆಯ ಮಾಲೀಕರಾದ ಎಂ. ಶ್ರೀನಿವಾಸ್ ಹೇಳಿದ್ದಾರೆ.

### ಪಿಒಪಿ ಮೂರ್ತಿಗಳು ಬಾಡಿಗೆಗೆ

ಪರಿಸರಕ್ಕೆ ಹಾನಿಕರವಾದ ಪಿಒಪಿ ಗಣೇಶ ಮೂರ್ತಿಗಳ ಮಾರಾಟ ಮಾಡುವುದಿಲ್ಲ. ಬದಲಿಗೆ ಅವುಗಳನ್ನು ಬಾಡಿಗೆಗೆ ನೀಡುತ್ತೇವೆ. ದಿನಕ್ಕೆ 10 ಸಾವಿರ ರೂ.ನಂತೆ ಸಾರ್ವಜನಿಕ ಗಣೇಶೋತ್ಸವಗಳಿಗೆ ಬಾಡಿಗೆಗೆ ನೀಡಲಾಗುವುದು," ಎಂದು ಮೂರ್ತಿ ತಯಾರಕರೊಬ್ಬರು ಹೇಳಿದರು.

ಪಿಒಪಿ ಗಣಪತಿ ಮೂರ್ತಿಗಳನ್ನು ನೀರಿನಲ್ಲಿ ವಿಸರ್ಜಿಸಿದಾಗ ಅದು ನೀರಲ್ಲಿ ಬೇಗ ಕರಗದು. ಜೊತೆಗೆ ಅದಕ್ಕೆ ಲೇಪಿಸಿದ ರಾಸಾಯನಿಕ ಬಣ್ಣಗಳಿಂದ ನೀರಲ್ಲಿರುವ ಜೀವ ಜಂತುಗಳ ಪ್ರಾಣಕ್ಕೆ ತೊಂದರೆಯಾಗುತ್ತದೆ. ಮಣ್ಣಿನ ಮೂರ್ತಿ ಬಳಸುವುದರಿಂದ ಅದು ನೀರಿನಲ್ಲಿ ಸಹಜವಾಗಿ ಕರಗಿ ಹೋಗುತ್ತದೆ. ಯಾವುದೇ ರೀತಿಯ ಸಮಸ್ಯೆಗಳು ಉದ್ಭವಿಸುವುದಿಲ್ಲ.

ಗಣೇಶ ಮೂರ್ತಿ ಹಾಗೂ ಮಂಟಪಗಳ ಅಲಂಕಾರಕ್ಕೆ ಥರ್ಮಾಕೋಲ್, ಪ್ಲಾಸ್ಟಿಕ್, ಫೈಬರ್, ಪ್ಲಾಸ್ಟರ್ ಆಫ್ ಪ್ಯಾರಿಸ್ ಮುಂತಾದ ವಸ್ತುಗಳನ್ನು ಬಳಸಬಾರದು. ಅಲಂಕರಿಸುವಾಗ ಕಾಗದ, ಮರ, ಬಟ್ಟೆ, ಸಾವಯವ ವರ್ಣಗಳು ಇತ್ಯಾದಿ ವಸ್ತುಗಳ ಬಳಕೆಯನ್ನು



ಉತ್ತೇಜಿಸಬೇಕು. ಪ್ರಸ್ತುತ ನೀರಿನಲ್ಲಿ ವಿಗ್ರಹಗಳನ್ನು ಮುಳುಗಿಸುವುದನ್ನು ನಿಷೇಧಿಸಲಾಗಿರುವುದರಿಂದ, ಅವುಗಳನ್ನು ಮನೆಯಲ್ಲೇ ನೀರಿನ ತೊಟ್ಟಿಯಲ್ಲಿ ಮುಳುಗಿಸಬಹುದು, ಅವು ಕರಗಿದ ನಂತರ ಆ ನೀರನ್ನು ಗಿಡಗಳಿಗೆ ಹಾಕಬಹುದು. ಅರಿಶಿನ, ಗೋರಂಟಿ, ಮೆಹೆಂದಿ, ಅಕ್ಕಿ ಪುಡಿ ಮತ್ತು ಗುಲಾಲ್‌ನಂತಹ ನೈಸರ್ಗಿಕ ಬಣ್ಣಗಳಿಂದ ರಂಗೋಲಿಯನ್ನು ತಯಾರಿಸಿ. ಅಂತಹ ಬಣ್ಣಗಳು ಪರಿಸರ ಅಥವಾ ಮಾನವನ ಆರೋಗ್ಯದ ಮೇಲೆ ಯಾವುದೇ ಋಣಾತ್ಮಕ ಪರಿಣಾಮಗಳನ್ನು ಬೀರುವುದಿಲ್ಲ.

ನೈವೇದ್ಯ, ಪ್ರಸಾದ, ಪೆಂಡಾಲ್‌ಗಳಿಗೆ ತಂದ ವಸ್ತುಗಳನ್ನು ಚೆಲ್ಲಾಪಿಲ್ಲಿಯಾಗಿ ಎಸೆದು. ಅದನ್ನು ನಿರ್ಲಕ್ಷಿಸಿದರೆ ಪರಿಸರವನ್ನು ಕಲುಷಿತಗೊಳಿಸುತ್ತದೆ. ಆದ್ದರಿಂದ, ಪ್ಲಾಸ್ಟಿಕ್ ಚೀಲಗಳನ್ನು ತಿರಸ್ಕರಿಸಿ. ಬದಲಿಗೆ ಬಟ್ಟೆ ಚೀಲಗಳ ಬಳಕೆಯನ್ನು ಪ್ರೋತ್ಸಾಹಿಸಬೇಕು. ಮರುಬಳಕೆ ಮಾಡಬಹುದಾದಂತವುಗಳನ್ನು ಬಳಸಬೇಕು.

ಜನರಿಗೆ ತೊಂದರೆ ನೀಡುವಂತೆ ಕಿವಿಗಡಚ್ಚಿಕ್ಕುವ ಸಂಗೀತವನ್ನು ನುಡಿಸುವುದರ ಬದಲಾಗಿ, ಮೃದಂಗ, ತಬಲಾ ಮತ್ತು ಇತರ ಸಂಪ್ರದಾಯಿಕ ದೇಶಿಯ ವಾದ್ಯಗಳನ್ನು ಬಳಸಿದರೆ ಅದರ ಸಂಗೀತ ಕಿವಿಗೆ ಮುದನೀಡುತ್ತದೆ. ಉತ್ಸವಕ್ಕೂ ಹಬ್ಬದ ಕಳೆಬರುತ್ತದೆ. ಬೆಳಿಗ್ಗೆ 6 ರಿಂದ ರಾತ್ರಿ 10 ರ ನಡುವೆ, ಸ್ಪೀಕರ್‌ಗಳು ಮತ್ತು ಮೈಕ್ರೊಫೋನ್‌ಗಳನ್ನು ಬಳಸುವ ಮೂಲಕ ನೆರೆಹೊರೆಯವರಿಗೆ ಆಗುವ ತೊಂದರೆ ತಪ್ಪಿಸಬೇಕು.

ಪಟಾಕಿ ಸಿಡಿಸುವುದರಿಂದ ಸಮುದಾಯದ ಚಿಕ್ಕ ಮಕ್ಕಳು ಮತ್ತು ವೃದ್ಧರಿಗೆ ಶ್ರವಣದೋಷ ಉಂಟಾಗುತ್ತದೆ. ಪಟಾಕಿಗಳು ವಿಷಕಾರಿ ಹೊಗೆಯನ್ನು ಹೊರಸೂಸುತ್ತವೆ ಅದು ಆರೋಗ್ಯ ಹಾಗೂ ಪರಿಸರಕ್ಕೆ ಹಾನಿಕಾರಕವಾಗಿದೆ. ರೋಗಿಗಳ ಸುರಕ್ಷತೆ ಮತ್ತು ಸಾರ್ವಜನಿಕ ಆರೋಗ್ಯ ಎರಡನ್ನೂ ಗಮನದಲ್ಲಿರಿಸಿದರೆ ಒಳ್ಳೆಯದು.

ಗಣೇಶ ವಿಗ್ರಹಗಳನ್ನು ಮುಳುಗಿಸಲು ಬಳಸಿದ ನೀರನ್ನು ನೀರಾವರಿ ಮತ್ತು ಕುಡಿಯಲು ಸಹ ಬಳಸಿಕೊಳ್ಳಲಾಗುತ್ತದೆ, ಇದು ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮಗಳನ್ನು ಉಂಟುಮಾಡಬಹುದು. ನದಿ, ಸರೋವರ ಅಥವಾ ಕೊಳದಂತಹ ನೈಸರ್ಗಿಕ ನೀರಿನ ಸರಬರಾಜನ್ನು ಗಣೇಶ ಮೂರ್ತಿ ಮುಳುಗಿಸಲು ಬಳಸುವ ಬದಲು, ಕೃತಕ ಟ್ಯಾಂಕ್ ಅಥವಾ ಕೃತಕ ಇಮ್ಮರ್ಶನ್ ಟ್ಯಾಂಕ್ ಅನ್ನು ಬಳಸಿದರೆ ಒಳ್ಳೆಯದು.

**– ಸವಿತಾ ನಾಯ್ಕ್**

# ದೇಶಾದ್ಯಂತ 79ನೇ ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮ



ಭಾರತವು 79ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮದಲ್ಲಿದೆ. ಸ್ವಾತಂತ್ರ್ಯ ದಿನಾಚರಣೆಯಂದು ರಾಷ್ಟ್ರಧ್ವಜವನ್ನು ರಾಷ್ಟ್ರ ರಾಜಧಾನಿ ದೆಹಲಿ ಸಹಿತ ದೇಶದ ಮೂಲೆ ಮೂಲೆಗಳಲ್ಲಿ ಹಾರಿಸಲಾಗುತ್ತದೆ.

ಭಾರತ ದೇಶದ 79ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆಯ ಸಡಗರ ಸಂಭ್ರಮ ದೇಶದ ಮೂಲೆ, ಮೂಲೆಗಳಲ್ಲಿ ಪ್ರತಿಧ್ವನಿಸುತ್ತದೆ.

ಸರಿ ಸುಮಾರು ಎರಡು ಶತಮಾನಗಳ ಕಾಲ ಬ್ರಿಟೀಷರ ದಾಸ್ಯದಲ್ಲಿದ್ದ ಭಾರತವು 1947ರ ಆಗಸ್ಟ್ 15ರಂದು ಸ್ವಾತಂತ್ರ್ಯ ಪಡೆದುಕೊಂಡಿತು. ಸ್ವಾತಂತ್ರ್ಯ ದಿನಾಚರಣೆ ಎಂದಾಕ್ಷಣ ಭಾರತ ಮಾತೆಯ ಸ್ವಾತಂತ್ರ್ಯಕ್ಕಾಗಿ ಬಲಿದಾನಗೈದ ಸಾಕಷ್ಟು ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಬಲಿದಾನ ಕಣ್ಮುಂದೆ ಸುಳಿದಾಡುತ್ತದೆ. ಮಹಾತ್ಮಾ ಗಾಂಧಿಯವರ ಅಹಿಂಸಾ ಚಳವಳಿ ಹಾಗೂ ಹಲವಾರು ಮಂದಿ ಸ್ವಾತಂತ್ರ್ಯ ಹೋರಾಟಗಾರರ ಹೋರಾಟದ ಮೂಲಕ ಭಾರತವು ಬ್ರಿಟೀಷರ ದಾಸ್ಯದಿಂದ ಮುಕ್ತಗೊಂಡಿತ್ತು. ಹೀಗಾಗಿ ಈ ದಿನವನ್ನು ಸಂಭ್ರಮಿಸುವ ನಿಟ್ಟಿನಲ್ಲಿ ಪ್ರತಿವರ್ಷ ಸ್ವಾತಂತ್ರ್ಯ ದಿನಾಚರಣೆಯ ದಿನದಂದು ಭಾರತ ತ್ರಿವರ್ಣ ಧ್ವಜವನ್ನು ಹಾರಿಸಿ ಗೌರವ ವಂದನೆ ಸಲ್ಲಿಸಲಾಗುತ್ತದೆ.

145 ಕೋಟಿ ಜನಸಂಖ್ಯೆ ಹೊಂದಿರುವ ಜಗತ್ತಿನ ಬೃಹತ್ ಪ್ರಜಾಪ್ರಭುತ್ವ ದೇಶ ಭಾರತ 79ನೇ ಸ್ವಾತಂತ್ರ್ಯೋತ್ಸವ ಆಚರಣೆ ಸಂಭ್ರಮಿಸಲು ಹಲವಾರು ಕಾರಣಗಳಿವೆ.

ಪ್ರಜಾಪ್ರಭುತ್ವದ ತತ್ವದ ಆಧಾರದ ಮೇಲೆ ರಚಿತವಾದ ಭಾರತ ಸಂವಿಧಾನ ಶಿಲ್ಪಿ ಡಾ ಬಿ.ಆರ್. ಅಂಬೇಡ್ಕರ್ ಅವರು ನೀಡಿರುವ ಸಂವಿಧಾನದ ಅಡಿಯಲ್ಲಿ ದೇಶವು ಕಾರ್ಯನಿರ್ವಹಿಸುತ್ತದೆ. ಸಂವಿಧಾನ ದೇಶದಲ್ಲಿರುವ ಎಲ್ಲಾ ಜಾತಿ, ಧರ್ಮ, ಭಾಷೆಯವರಿಗೂ ಬದುಕುವ ಹಕ್ಕು, ಮತದಾನದ ಹಕ್ಕು, ವಾಕ್ ಸ್ವಾತಂತ್ರ್ಯ ಹಕ್ಕು ಪ್ರತಿಭಟನೆಯ ಹಕ್ಕು ನೀಡುವುದರ ಜೊತೆಗೆ ತಮ್ಮ ತಮ್ಮ ಧರ್ಮದ ಆಚಾರ ವಿಚಾರದಂತೆ ಬದುಕುವ ಸ್ವಾತಂತ್ರ್ಯ ನೀಡಿದೆ.

ಭಾರತ ಸರ್ಕಾರ ಯಾವುದೇ ಧರ್ಮಕ್ಕೆ ಸೇರಿಲ್ಲ. ಸರ್ಕಾರ ನಡೆಸುವವರು ತಮ್ಮ ಧರ್ಮವನ್ನು ಮನೆಯಲ್ಲಿ ಆಚರಿಸಿಕೊಳ್ಳಬಹುದೆ ಹೊರತು ಆಡಳಿತದಲ್ಲಿ ಧರ್ಮ ತರಬಾರದು ಎಂದು ಸಂವಿಧಾನ ಹೇಳಿರುವುದು ಭಾರತ ವೈವಿದ್ಯತೆಯಲ್ಲಿ ಏಕತೆಯನ್ನು ಕಾಪಾಡಿಕೊಳ್ಳಲು ಸಹಾಯಕವಾಗಿದೆ.

ಸ್ವಾತಂತ್ರ್ಯ ದಿನಾಚರಣೆ ಸಂಭ್ರಮಿಸುವ ನಾವು ಸ್ವಾತಂತ್ರ್ಯ ವೀರರ ತ್ಯಾಗವನ್ನು ವ್ಯರ್ಥವಾಗದಂತೆ ದೃಢ ಸಂಕಲ್ಪ ಮಾಡೋಣ. ಈ ಸ್ವಾತಂತ್ರ್ಯ ದಿನದಂದು ನಾವೆಲ್ಲರೂ ಸದಾ ನಮ್ಮ ರಾಷ್ಟ್ರದ ಘನತೆಯನ್ನು ಎತ್ತಿ ಹಿಡಿಯುವ ಪ್ರತಿಜ್ಞೆ ಮಾಡೋಣ. ನಾವೆಲ್ಲರೂ ಸೇರಿ ನಮ್ಮ ದೇಶವನ್ನು ಹೆಮ್ಮೆ ಪಡುವಂತೆ ಮಾಡೋಣ. ನಮ್ಮ ಸ್ವಾತಂತ್ರ್ಯ ವೀರರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯೋಣ.

ಜನರು ತಮ್ಮ ದೇಶವನ್ನು ಗೌರವಿಸಿದರೆ ಮಾತ್ರ ಒಂದು ದೇಶ ಬೆಳಗಲು, ಅಭಿವೃದ್ಧಿ ಹೊಂದಲು ಸಾಧ್ಯ. ನಮ್ಮ ದೇಶ ಎಂಬ ಹೆಮ್ಮೆ ಎಂಬ ಭಾವ ಎಲ್ಲರಲ್ಲೂ ಇರಲಿ. ದೇಶವನ್ನು ಕಟ್ಟುವ ಹುಮ್ಮಸ್ಸು ಸದಾ ಜಾಗೃತವಾಗಿರಲಿ. ಸ್ವಾತಂತ್ರ್ಯ ದಿನಾಚರಣೆಯ ಈ ಮಹತ್ವದ ದಿನದಂದು ನಮ್ಮ ವೀರರ ಧೈರ್ಯ, ತ್ಯಾಗಗಳನ್ನು ಸ್ಮರಿಸೋಣ, ಗೌರವಿಸೋಣ.

ಸ್ವಾತಂತ್ರ್ಯ ದಿನಾಚರಣೆಯ ಈ ಸಂದರ್ಭದಲ್ಲಿ ನಮ್ಮ ಗಡಿಯನ್ನು ರಕ್ಷಣೆ ಮಾಡುವ ಎಲ್ಲಾ ವೀರ ಯೋಧರಿಗೆ ನಮನ ಸಲ್ಲಿಸೋಣ.





ಯೋಧರು ನಮ್ಮ ಆಸ್ತಿ.

ನಮ್ಮ ಹೆಮ್ಮೆಯ ತ್ರಿವರ್ಣ ಧ್ವಜ ಸದಾ ಎತ್ತರದಲ್ಲಿ ಹಾರುವಂತೆ ಮಾಡೋಣ. ದೇಶವನ್ನು ಇನ್ನಷ್ಟು ಬಲಿಷ್ಠವಾಗಿ ಕಟ್ಟೋಣ. ಸದೃಢ ದೇಶದ ನಿರ್ಮಾಣಕ್ಕೆ ನಾವೆಲ್ಲರೂ ಕಟಿಬದ್ಧರಾಗೋಣ.

ಈ ದೇಶದ ಹೆಮ್ಮೆಯ ಹಾಗೂ ಜವಾಬ್ದಾರಿಯುತ ಪ್ರಜೆಗಳಾಗಿ ದೇಶದಿಂದ ನಾವು ಪಡೆದುಕೊಂಡದ್ದನ್ನು ಮರಳಿ ನೀಡುವ ಜವಾಬ್ದಾರಿಯೂ ನಮ್ಮ ಮೇಲಿದೆ. ಈ ಜವಾಬ್ದಾರಿಯನ್ನು ಎಲ್ಲರೂ ನಿಭಾಯಿಸೋಣ.

ನಾವು ಧರ್ಮಮಾರ್ಗದಲ್ಲಿ ಸಾಗೋಣ. ದೇಶದ ಪ್ರಗತಿಗೆ ಸದಾ ಕೊಡುಗೆ ನೀಡೋಣ. ದೇಶ ಸದೃಢವಾಗಿದ್ದರೆ ನಮ್ಮ ಬದುಕು ಸದೃಢ.

ಈಗ ನಾವು ಸವಿಯುತ್ತಿರುವ ಸ್ವಾತಂತ್ರ್ಯದ ಸಿಹಿಯನ್ನು ನೀಡಲು ಕಷ್ಟಪಟ್ಟು, ಬದುಕನ್ನೇ ತ್ಯಾಗ ಮಾಡಿದ ವೀರರನ್ನು ಗೌರವಿಸುವ ದಿನವಿದು. ಈ ವೀರರ ಕೆಚ್ಚೆದೆ, ಹೋರಾಟದ ಕಿಚ್ಚು ಸದಾ ನಮ್ಮ ಹೃದಯದಲ್ಲಿ ಇರುತ್ತದೆ.

ನಮ್ಮ ದೇಶ ಎಲ್ಲಾ ಕ್ಷೇತ್ರಗಳಲ್ಲಿಯೂ ಪ್ರಗತಿ ಹೊಂದುವ ನಿಟ್ಟಿನಲ್ಲಿ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡೋಣ. ಸ್ವಾತಂತ್ರ್ಯ ದಿನಾಚರಣೆಯ ಈ ಸಂಭ್ರಮದ ಸಂದರ್ಭದಲ್ಲಿ ಈ ಪ್ರತಿಜ್ಞೆ ಮಾಡೋಣ.

### ಗಣ್ಯರ ಮಾತು

**ಸ್ವಾತಂತ್ರ್ಯಕ್ಕೆ ಬೆಲೆ ಕಟ್ಟಲಾಗದು. ಅದು ಜೀವನದ ಉಸಿರು – ಮಹಾತ್ಮಾ ಗಾಂಧೀಜಿ**

**ನೀವು ನನಗೆ ರಕ್ತ ಕೊಡಿ ಮತ್ತು ನಾನು ನಿಮಗೆ ಸ್ವಾತಂತ್ರ್ಯ ಕೊಡುತ್ತೇನೆ – ನೇತಾಜಿ ಸುಭಾಷ್ ಚಂದ್ರ ಬೋಸ್**

**ನಿಮ್ಮ ದೇಶವು ನಿಮಗಾಗಿ ಏನು ಮಾಡಬಹುದು ಎಂದು ಕೇಳಬೇಡಿ. ನಿಮ್ಮ ದೇಶಕ್ಕಾಗಿ ನೀವು ಏನು ಮಾಡಬಹುದು ಎಂದು ಕೇಳಿಕೊಳ್ಳಿ – ಜವಾಹರಲಾಲ್ ನೆಹರು**

**ಎಲ್ಲಿಯ ತನಕ ನೀವು ಸಾಮಾಜಿಕ ಸ್ವಾತಂತ್ರ್ಯವನ್ನು ಸಾಧಿಸುವುದಿಲ್ಲವೋ ಅಲ್ಲಿಯ ತನಕ ಕಾನೂನು ಒದಗಿಸುವ ಸ್ವಾತಂತ್ರ್ಯವು ನಿಮಗೆ ಯಾವುದೇ ಪ್ರಯೋಜನವಾಗುವುದಿಲ್ಲ. – ಡಾ. ಬಿ.ಆರ್. ಅಂಬೇಡ್ಕರ್**

**ವ್ಯಕ್ತಿಗಳನ್ನು ಕೊಲ್ಲುವುದು ಸುಲಭ, ಆದರೆ ನೀವು ಆಲೋಚನೆಗಳನ್ನು ಕೊಲ್ಲಲು ಸಾಧ್ಯವಿಲ್ಲ. ದೊಡ್ಡ ಸಾಮ್ರಾಜ್ಯಗಳು ಕುಸಿಯಬಹುದು, ಆದರೆ ಆದರ್ಶಗಳು ಉಳಿದುಕೊಳ್ಳುತ್ತವೆ – ಭಗತ್ ಸಿಂಗ್**

### ಫಲ–ಪುಷ್ಪ ಪ್ರದರ್ಶನದ ಆಕರ್ಷಣೆ

ಬೆಂಗಳೂರಿನ ಲಾಲ್‌ಬಾಗ್ ಸಸ್ಯ ತೋಟದಲ್ಲಿ ಆಗಸ್ಟ್ 7ರಂದು ಪ್ರಾರಂಭವಾಗಿ ಆಗಸ್ಟ್ 17 ರಂದು ಫಲ–ಪುಷ್ಪ ಪ್ರದರ್ಶನದ ಮುಕ್ತಾಯ. ಈ ವರ್ಷದ ಸ್ವಾತಂತ್ರ್ಯ ದಿನಾಚರಣೆಯ (Independece Day) ಪುಷ್ಪ ಪ್ರದರ್ಶನದಲ್ಲಿ ಕರ್ನಾಟಕದ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರಾದ ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ ಅವರನ್ನು ಗೌರವಿಸಲಾಗಿದೆ. ಕಿತ್ತೂರಿನ ರಾಣಿ ಚೆನ್ನಮ್ಮ ಮತ್ತು ಅವರ ಸೇನಾ ಮುಖ್ಯಸ್ಥ ಸಂಗೊಳ್ಳಿ ರಾಯಣ್ಣ 1820 ರ ದಶಕದಲ್ಲಿ ಬ್ರಿಟಿಷ್ ಆಳ್ವಿಕೆಯ ವಿರುದ್ಧ ಹೋರಾಡಿದರು. ಪುಷ್ಪ ಪ್ರದರ್ಶನವು ಹೂವಿನ ಅಲಂಕಾರದ ಮೂಲಕ ಅವರ ಹೋರಾಟವನ್ನು ಚಿತ್ರಿಸಿದೆ.

### 218ನೇಯ ಫ್ಲವರ್ ಶೋ

ಲಾಲ್‌ಬಾಗ್ ಬೊಟಾನಿಕಲ್ ಗಾರ್ಡನ್‌ನ ಜಂಟಿ ನಿರ್ದೇಶಕ ಎಂ. ಜಗದೀಶ್ ಅವರ ಪ್ರಕಾರ ವಾರ್ಷಿಕ ಕಾರ್ಯಕ್ರಮದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ ಅವರ ಜೀವನದ ಅಂಶಗಳನ್ನು ಪುಷ್ಪ ಪ್ರದರ್ಶನದಲ್ಲಿ ವರ್ಣರಂಜಿತವಾಗಿ ಪ್ರದರ್ಶಿಸಲಾಗಿದೆ.

### ಸಂಭ್ರಮಿಸಿದ 11 ಲಕ್ಷಕ್ಕೂ ಅಧಿಕ ಮಂದಿ ಸ್ವಾತಂತ್ರ್ಯ ಪ್ರೇಮಿಗಳು

ಪ್ರದರ್ಶನಕ್ಕಾಗಿ ಸಿದ್ಧತೆಗಳು ಸುಮಾರು ಮೂರು ತಿಂಗಳ ಹಿಂದೆ ಪ್ರಾರಂಭವಾದವು ಮತ್ತು ಇಲಾಖೆ ಈಗಾಗಲೇ ಸುಮಾರು ಆರು ಲಕ್ಷ ಸಸ್ಯಗಳನ್ನು ಬೆಳೆಸಲಾಗಿದೆ. ಹೂವುಗಳನ್ನು ಅನೇಕ ನರ್ಸರಿಗಳಿಂದ. ಆಂಧ್ರಪ್ರದೇಶ, ಕೇರಳ ಮತ್ತು ತಮಿಳುನಾಡಿನಿಂದ ಹೂವುಗಳನ್ನು ತರಿಸಲಾಗಿದೆ. ನಂದಿ ಬೆಟ್ಟ ಮತ್ತು ಊಟಿಯಿಂದ ವಿಶೇಷ ಹೂವುಗಳು ಪಲಪುಷ್ಪ ಪ್ರದರ್ಶನದ ಆಕರ್ಷಣೆ ಹೆಚ್ಚಿಸಿದೆ" ಲಾಲ್‌ಬಾಗ್ ಫ್ಲವರ್ ಶೋ ಕಾರ್ಯಕ್ರಮದಲ್ಲಿ ಸುಮಾರು 11 ಲಕ್ಷಕ್ಕೂ ಅಧಿಕ ಮಂದಿ ಸ್ವಾತಂತ್ರ್ಯ ಪ್ರೇಮಿಗಳ ಸಂಭ್ರಮ.

**– ಮಂಜುನಾಥ್ ನಾಯ್ಕ್, ಬೆಂಗಳೂರು.**



## 38 ವರ್ಷಗಳಲ್ಲಿ ತೃಪ್ತಿಕರ ಸೇವೆ...

# ಸದಸ್ಯರ ಆರ್ಥಿಕ ಸ್ವಾವಲಂಬನೆಯ ಆಶಾಕಿರಣ

## ಅರ್ಬನ್ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಕನಕಪುರ




ಭಾರತದಲ್ಲಿ ಸಹಕಾರ ಚಳವಳಿಗೆ 120 ವರ್ಷಗಳ ಸುದೀರ್ಘ ಇತಿಹಾಸವಿದೆ. ವಿಶ್ವದಲ್ಲಿಯೇ ಅತ್ಯಂತ ಬೃಹತ್ತಾದ ಸಹಕಾರ ಚಳವಳಿಯನ್ನು ಹೊಂದಿದ ರಾಷ್ಟ್ರ ನಮ್ಮದು. ಸಹಕಾರ ಸಂಸ್ಥೆಗಳು ದೇಶದ ಆರ್ಥಿಕ ಸುಸ್ಥಿರತೆಗೆ ಅಪಾರ ಕೊಡುಗೆಯನ್ನು ನೀಡುತ್ತಿವೆ. ಸಹಕಾರ ತತ್ವ ಮತ್ತು ಆಚರಣೆಯ ಕಾರ್ಯ ವ್ಯಾಪ್ತಿಯಲ್ಲಿ ಸಂಘಟಿತಗೊಂಡ ಸಹಕಾರ ಸಂಸ್ಥೆಗಳು ಅದಮ್ಯ ಚೈತನ್ಯದೊಂದಿಗೆ ಕಾರ್ಯ ಮಾಡುತ್ತಿವೆ.

ಸಹಕಾರ ಕ್ಷೇತ್ರದ ಬಗ್ಗೆ ಮಾಜಿ ಪ್ರಧಾನಿ ಪಂಡಿತ್ ಜವಹರಲಾಲ್ ನೆಹರೂರವರ ಅಪೇಕ್ಷೆಯಂತೆ ಪ್ರತಿ ಹಳ್ಳಿಯಲ್ಲಿಯೂ ಸ್ವಾವಲಂಬನೆ, ಸಹಕಾರ ಹಾಗೂ ಪರಸ್ಪರ ಸಹಾಯದ ಆಧಾರದ ಮೇಲೆ ಸಂಘಟನೆಗೊಂಡು ತನಗೆ ತಾನೇ ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸಬಲ್ಲ. ಒಂದು ಸಹಕಾರ ಸಂಘದ ಅವಶ್ಯಕತೆ ಇದ್ದು ತನ್ಮೂಲಕ ಸಹಕಾರ ಕೃಷಿ ಪದ್ಧತಿಗೆ ಸಣ್ಣ ರೈತರನ್ನು ಒಂದುಗೂಡಿಸಬೇಕು, ಆಗ ಹಳ್ಳಿಗಳು ಸರ್ವತೋಮುಖ ಅಭಿವೃದ್ಧಿಗೆ ಸಾಧನವಾಗುತ್ತವೆ ಎಂಬ ಆಶಯಗಳೊಂದಿಗೆ ದೇಶದ ಶೇ. 100ರಷ್ಟು ಗ್ರಾಮಗಳನ್ನು ಸಹಕಾರ ವಲಯವು ವ್ಯಾಪಿಸಿದೆ.

"ರೇಷ್ಮೆ ನಗರಿ" ಎಂದು ಕರೆಯಲ್ಪಡುವ ರಾಮನಗರವು ರೇಷ್ಮೆ ಕೃಷಿಗೆ ಹೆಸರುವಾಸಿಯಾಗಿದೆ. ಏಷ್ಯಾದಲ್ಲಿ ರೇಷ್ಮೆ ಗೂಡುಗಳಿಗೆ ಅತಿದೊಡ್ಡ ಮಾರುಕಟ್ಟೆಯಾಗಿದೆ. ರಾಮನಗರ ಜಿಲ್ಲೆಯ ಕನಕಪುರ ಪಟ್ಟಣ ತಾಲ್ಲೂಕು ಕೇಂದ್ರವಾಗಿದೆ. ಇದು ಪ್ರಮುಖ ರೇಷ್ಮೆ ಗೂಡು ಉತ್ಪಾದಕ ಮತ್ತು ಅದರ ಹಚ್ಚ ಹಸಿರಿನ ಪರಿಸರಕ್ಕೆ, ರೇಷ್ಮೆ ಉದ್ಯಮಕ್ಕೆ ಗಮನಾರ್ಹ ಕೊಡುಗೆ ನೀಡಿದೆ. ಅರ್ಕಾವತಿ ನದಿಯ ಸಾಮೀಪ್ಯ ಮತ್ತು ಅದರ ರಮಣೀಯ, ಹಸಿರು ಭೂದೃಶ್ಯಗಳಿಗೂ ಇದು ಹೆಸರುವಾಸಿಯಾಗಿದೆ. ರೇಷ್ಮೆ ಕೃಷಿ ರೈತರ ಕುಟುಂಬಗಳನ್ನು ಆರ್ಥಿಕವಾಗಿ ಸಬಲರನ್ನಾಗಿಸುತ್ತಿದೆ. ಕನಕಪುರ ಪಟ್ಟಣದ ಅರ್ಬನ್ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿಯು ಕಳೆದ 38 ವರ್ಷಗಳಿಂದ ಸಹಕಾರಿ ಸದಸ್ಯರ ಸೇವೆಯಲ್ಲಿ ತೊಡಗಿಸಿಕೊಂಡು ಸದಸ್ಯರ ಆರ್ಥಿಕ ಸ್ವಾವಲಂಬನೆಗೆ ನೆರವಾಗುತ್ತಾ ಬಂದಿದೆ.

ಕನಕಪುರ ಪಟ್ಟಣದ ಜಿ.ಆರ್ ಅಬ್ಬಿ ಅವರ ನೇತೃತ್ವದಲ್ಲಿ 1986ರಲ್ಲಿ ರೂ. 2 ಲಕ್ಷ ಶೇರು ಬಂಡವಾಳದೊಂದಿಗೆ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿಯು ಸಣ್ಣ ಪ್ರಮಾಣದಲ್ಲಿ ಪ್ರಾರಂಭವಾಯಿತು. ಸಂಘವು ಪ್ರಸ್ತುತ ದಿನಾಂಕ 31-03-2025ಕೆ ತಾತ್ಕಾಲಿಕ ರೂ 231.74ಲಕ್ಷ ಷೇರು ಬಂಡವಾಳ, ರೂ. 11759.07 ಲಕ್ಷ ಠೇವಣಿ, ರೂ 14002.83 ಲಕ್ಷಸಾಲಗಳು, ವಾರ್ಷಿಕ ವ್ಯವಹಾರ ರೂ. 53342.54 ಲಕ್ಷ ಹೊಂದಿದ್ದು. ಎಲ್ಲಾ ವ್ಯವಹಾರಗಳಲ್ಲಿ ಗುರಿ ಸಾಧನೆಗೆ ಶ್ರಮಿಸಿ ಕಳೆದ 38 ವರ್ಷಗಳ ಇತಿಹಾಸದಲ್ಲಿ ಸಂಘವು 2024-25ನೇ ಸಾಲಿನಲ್ಲಿ ರೂ. 1.25 ಲಕ್ಷ ಲಾಭ ಗಳಿಸಿರುವುದು ಹೆಮ್ಮೆಯ ವಿಚಾರವಾಗಿದೆ.

**ಸಂಘದ ಉದ್ದೇಶ :** ಸಂಘದ ಸದಸ್ಯರು ಮತ್ತು ಠೇವಣಿದಾರರಲ್ಲಿ ಮಿತವ್ಯಯ, ಸ್ವಸಹಾಯ ಮತ್ತು ಸಹಕಾರ ಭಾವನೆಗಳನ್ನು ಪ್ರೋತ್ಸಾಹಿಸುವುದು. ಸಂಘದ ಸದಸ್ಯರಿಗೆ ಸಾಲಗಳನ್ನು ನೀಡುವ ಮೂಲಕ ಅವರ ಜೀವನ ಮಟ್ಟವನ್ನು ವೃದ್ಧಿಸುವುದು. ಕೃಷಿ ಆಧಾರಿತ ಉದ್ದಿಮೆ, ನೇಕಾರಿಕೆ, ಸ್ವಂತ ಉದ್ದಿಮೆದಾರರಿಗೆ ಹಣಕಾಸು ಪೂರೈಸುವುದು.

ಸದಸ್ಯರ ಅವಲಂಬಿತರಿಗೆ ಆರ್ಥಿಕ ಭದ್ರತೆಯನ್ನು ಒದಗಿಸುವ ಉದ್ದೇಶದಿಂದ ಸಾಮಾನ್ಯ ವಿಮಾ ನಿಗಮ, ಜೀವ ವಿಮಾ ನಿಗಮಗಳು ಒದಗಿಸುವ ಸಾಮೂಹಿಕ ವಿಮಾ ಭದ್ರತೆಗಳನ್ನು

ಒದಗಿಸುವುದು. ಸಮಾಜದಲ್ಲಿ ಆರ್ಥಿಕವಾಗಿ ದುರ್ಬಲರಾಗಿರುವ ಜನರನ್ನು ಸಂಘದ ಸದಸ್ಯರನ್ನಾಗಿಸಿ ಅವರುಗಳನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಅಭಿವೃದ್ಧಿಗೊಳಿಸುವ ಯೋಜನೆಗಳನ್ನು ರೂಪಿಸುವುದು. ಸಂಘದ ಸದಸ್ಯರುಗಳ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಸಾಲ ಒದಗಿಸುವುದು ಸಂಘದ ಪ್ರಮುಖ ಉದ್ದೇಶಗಳಾಗಿವೆ.

**ಸಾಲ ಸೌಲಭ್ಯಗಳು :** ಆಭರಣ ಸಾಲ, ಸ್ಥಿರಾಸ್ತಿ ಅಡಮಾನ ಸಾಲ, ಜಾಮೀನು ಸಾಲ, ಸರ್ಕಾರಿ ಭದ್ರತಾ ಪತ್ರ ಸಾಲ, ಠೇವಣಿ ಆಧಾರಿತ ಸಾಲ, ನಗದು ಪತ್ರ ಸಾಲ, ಖಾಯಂ ಠೇವಣಿ ಸಾಲ, ನಿತ್ಯನಿಧಿ ಠೇವಣಿ ಸಾಲ, ಸಂಚಿತ ಠೇವಣಿ ಸಾಲ, ವೇತನ ಆಧಾರಿತ ಸಾಲ, ದ್ವಿಚಕ್ರ ವಾಹನ ಸಾಲ ಇತ್ಯಾದಿ.. ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಸಂಘದ ಸದಸ್ಯರಿಗೆ ಮರಣೋತ್ತರ ನಿಧಿ, ಧಾರ್ಮಿಕ ಕೆಲಸಗಳಿಗೆ ದೇಣಿಗೆ ನೀಡುವುದಾಗಿದೆ.

**ಸಂಘದ ಆಡಳಿತ ಮಂಡಳಿ**

**ಅಧ್ಯಕ್ಷರು: ಕಬ್ಬಾಳೇಗೌಡ**

**ಉಪಾಧ್ಯಕ್ಷರು: ಚೂಡಾಮಣಿ**

**ನಿರ್ದೇಶಕರುಗಳು: ರಾಮಚಂದ್ರ, ರಾಮಚಂದ್ರ ಉಪಾಧ್ಯ, ನಾಗರಾಜು, ಡಿ.ಶ್ರೀನಿವಾಸ್, ಜೆ.ನಟರಾಜು, ಹೇಮಶೇಖರ್.ಎನ್, ಚಂದ್ರು. ವಿ, ಚಿಕ್ಕಬೋರಯ್ಯ, ರಜನಿ ಎಸ್.ಎನ್, ಮಂಜುಳ ಟಿ.ಸಿ, ಪ್ರಧಾನ ವ್ಯವಸ್ಥಾಪಕರು: ಶೋಭಾ. ಎಂ**

## ಆಡಳಿತ ಮಂಡಳಿ




**ಸಂಘದ ನಾಲ್ಕು ವರ್ಷದ ಪ್ರಗತಿ ಪಕ್ಷಿ ನೋಟ (ಲಕ್ಷ ರೂ.ಗಳಲ್ಲಿ)**

| ವಿವರಗಳು | 31/03/2023 | 31/03/2024 | 31–3–2025 (ತಾತ್ಕಾಲಿಕ) |
|---|---|---|---|
| ಸಾಮಾನ್ಯ ಸದಸ್ಯರು | 3446 | 3426 | 3430 |
| ಶೇರು ಬಂಡವಾಳ | 216.23 | 226.23 | 231.74 |
| ಠೇವುಗಳು | 14597.05 | 11263.32 | 11759.07 |
| ಸಾಲಗಳು | 13360.2 | 12905.38 | 14002.83 |
| ಹೂಡಿಕೆಗಳು | 3332.26 | 1362.03 | 1000.31 |
| ವಾರ್ಷಿಕ ವಹಿವಾಟು | 57285.90 | 67017.60 | 53342.54 |
| ನಿವ್ವಳ ಲಾಭ | 44.61 | 107.53 | 125.86 |